24 February 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಂಪಾದಿಸುವುದು ಎಷ್ಟು ಮುಖ್ಯವೋ, ಅದನ್ನು ಉಳಿಸಿಕೊಳ್ಳುವುದು ಅಷ್ಟೇ ಮುಖ್ಯ. ಹಣವಾಗಲಿ, ಜ್ಞಾನವಾಗಲಿ, ಮರ್ಯಾದೆಯಾಗಲಿ!

-ಸ್ನೇಹಾ ಆನಂದ್

info.varthaman@gmail.com



ಗರ್ಭಕಂಠ ಕ್ಯಾನ್ಸರ್ ರೋಗ: ಲಸಿಕೆಯಿಂದ ತಡೆಗಟ್ಟಲು ಸಾಧ್ಯ — ಪುಟ ಸಂ. 2



ಫೆ.26,27ರಂದು ಶಿವಲಿಂಗ, ದೇಗುಲ ಲೋಕಾರ್ಪಣೆ — ಪುಟ ಸಂ. 4



ರಸ್ತೆಗೆ ಬಂದ ಅಂಗಡಿಗಳ ವಸ್ತುಗಳು: ಪಾದಚಾರಿಗಳಿಗೆ ಸಮಸ್ಯೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 105 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಸಂಪುಟ ಪುನರ್ ರಚನೆ ಕೂಗು

### ಕಾಂಗ್ರೆಸ್ ಹೈಕಮಾಂಡ್‌ಗೆ ಪತ್ರ ಬರೆದು 31 ಕೈ ಶಾಸಕರ ಆಗ್ರಹ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಗದ್ದಲದ ನಡುವೆವೇ ಸಚಿವ ಸಂಪುಟ ಪುನರ್ ರಚನೆಗೆ ಆಗ್ರಹಿಸಿ ಕಾಂಗ್ರೆಸ್ ಶಾಸಕರು ಹೈಕಮಾಂಡ್ ಗೆ ಪತ್ರ ಬರೆದಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಮಾಡಿ, ನಮಗೂ ಅವಕಾಶ ಕೊಡಿ ಎಂದು ಶಾಸಕರು ಧ್ವನಿ ಎತ್ತಿದ್ದಾರೆ.



ಮೊದಲ ಬಾರಿಗೆ ಗೆದ್ದಿರುವ ಕಾಂಗ್ರೆಸ್ ನ 31 ಶಾಸಕರು ಕಾಂಗ್ರೆಸ್ ಹೈಕಮಾಂಡ್ ನಾಯಕರಿಗೆ ಪತ್ರ ಬರೆದಿದ್ದಾರೆ. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲ ಕರ್ನಾಟಕ ಪ್ರವಾಸದಲ್ಲಿರುವಾಗಲೇ ಸಂಪುಟ ಪುನರ್ ರಚನೆ ಕೂಗು ಎದ್ದಿದೆ.

**ಪತ್ರದ ಸಾರಾಂಶ**

ಕಾಂಗ್ರೆಸ್ ನಿಂದ ಮೊದಲ ಬಾರಿ 38 ಶಾಸಕರು ಆಯ್ಕೆಯಾಗಿದ್ದಾರೆ. ಈ ಮೂಲಕ ರಾಜಕೀಯದಲ್ಲಿ ಯುವಕರ ಅವಶ್ಯ ಕತೆ ಇದೆ ಎಂದು ಜನ ಹೇಳಿದ್ದಾರೆ. ಮೊದಲ ಬಾರಿ ಗೆದ್ದವರಿಗೆ ಸಚಿವ ಸ್ಥಾನ ನೀಡಿ ಜನಾ ದೇಶಕ್ಕೆ ಮನ್ನಣೆ ನೀಡಿ. ಯುವಕರಿಗೆ ಅವಕಾಶ ನೀಡುವುದು ಈ ಕ್ಷಣದ ಬೇಡಿಕೆಯಾಗಿದೆ.

ಮೊದಲ ಬಾರಿ ಗೆದ್ದಿರುವ ಐವರು ಶಾಸಕರಿಗೆ ಸಚಿವ ಸ್ಥಾನ ನೀಡಿ. ಬೇರೆ ಸರ್ಕಾರದಲ್ಲಿ ಮೊದಲ ಬಾರಿ ಶಾಸಕರು ಸಿಎಂ ಆಗಿದ್ದಾರೆ. ಹೊಸ ಬರಿಗೆ ಅವಕಾಶ ನೀಡಿದರೆ ಮುಂದಿನ ಚುನಾ ವಣೆ ಗೆಲ್ಲಲು ಸಹಕಾರಿಯಾಗಲಿದೆ. ಪಕ್ಷ ನಿಷ್ಠೆ, ಸೈದ್ಧಾಂತಿಕವಾಗಿ ಗಟ್ಟಿಯಾಗಿರುವವರಿಗೆ ಅವಕಾಶ ನೀಡಿ ಎಂದು ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದು ಆಗ್ರಹಿಸಿದ್ದಾರೆ.













ಶಾಸಕರಾದ ಎ.ಎಸ್.ಪೊನ್ನಣ್ಣ, ಭೀಮಸೇನ ಚಿಮ್ಮನಕಟ್ಟಿ, ಪ್ರದೀಪ್ ಈಶ್ವರ್, ಇಕ್ಬಾಲ್ ಹುಸೇನ್, ಎನ್.ಟಿ.ಶ್ರೀನಿವಾಸ, ಅಶೋಕ್ ಕುಮಾರ್ ರೈ, ಎನ್.ಶ್ರೀನಿವಾಸ, ದರ್ಶನ್ ಧ್ರುವನಾರಾಯಣ, ಶಿವಗಂಗಾ ಬಸವರಾಜು, ವಿಶ್ವಾಸ್ ವೈದ್ಯ, ನಾರಾ ಭರತ್ ರೆಡ್ಡಿ, ಪ್ರಕಾಶ್ ಕೋಳಿವಾಡ, ಕೆ.ಎಸ್.ಆನಂದ, ಮಂಥರ್ ಗೌಡ, ಚನ್ನಾರೆಡ್ಡಿ ಪಾಟೀಲ್, ದೇವೇಂದ್ರಪ್ಪ. ಡಿ.ರವಿಶಂಕರ್, ನಯನಾ ಮೋಟಮ್ಮ, ರಾಜಾವೇಣುಗೋಪಾಲ ನಾಯಕ, ಮಹೇಂದ್ರ ತಮ್ಮಣ್ಣನವರ್, ಎ.ಸಿ.ಶ್ರೀನಿವಾಸ, ಅಶೋಕ್ ಮನಗೂಳಿ, ಪಿ.ರವಿಕುಮಾರ್, ಬಾಬಾಸಾಹೇಬ್ ಪಾಟೀಲ್ ಸೇರಿದಂತೆ 31 ಶಾಸಕರು ಪತ್ರಕ್ಕೆ ಸಹಿ ಹಾಕಿದ್ದಾರೆ.

## ಸಿದ್ದು ಸಾಮಾಜಿಕ ನ್ಯಾಯಕ್ಕೆ ಬದ್ಧ


* ಸಿದ್ದರಾಮಯ್ಯ ಪರ ಪರಮೇಶ್ವರ್ ಬ್ಯಾಟಿಂಗ್




**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದ್ದಾರೆ. ಸಾಮಾಜಿಕ ನ್ಯಾಯದ ಸಿದ್ಧಾಂತದಡಿಯೇ ಅವರು ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅದರಲ್ಲಿ ಹೊಸದೇನೂ ಇಲ್ಲ. ಅವರ ರಾಜಕೀಯ ಅಡಿಪಾಯವೇ ಸಾಮಾಜಿಕ ನ್ಯಾಯ ಎಂದು ಗೃಹಸಚಿವ ಪರಮೇಶ್ವರ್ ಅವರು ಸಿಎಂ ಪರ ಬ್ಯಾಟಿಂಗ್ ಮಾಡಿದರು. ಪುಟ 2ಕ್ಕೆ

## 10 ಲಕ್ಷ ಮೌಲ್ಯದ ಮಾದಕ ವಸ್ತು ವಶ: ನಾಲ್ವರ ಬಂಧನ









ವಿವರ ಪುಟ-02

## ಚರ್ಚೆಯಿಂದ ದಲಿತ ಸಿಎಂ ಆಗಲ್ಲ

### ಹೈಕಮಾಂಡ್ ನಿರ್ಧಾರ ಮುಖ್ಯ | ಸಚಿವ ಸತೀಶ್ ಜಾರಕಿಹೊಳಿ

**ಕಾರವಾರ:** ದಲಿತ ಮುಖ್ಯಮಂತ್ರಿ ಮಾಡುವ ಕುರಿತು ಎಲ್ಲಾ ಕಡೆ ಚರ್ಚೆಯಾಗುತ್ತಿದೆ. ಹಲವರು ಸಿಎಂ ಆಕಾಂಕ್ಷಿಗಳಾಗಿದ್ದಾರೆ. ಆದರೆ, ಚರ್ಚೆಯಾದ ತಕ್ಷಣ ಸಿಎಂ ಮಾಡಲು ಆಗುವುದಿಲ್ಲ. ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.



ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಾವ್ಯಾರೂ ಸಿಎಂ ರೇಸ್‌ನಲ್ಲಿ ಇಲ್ಲ. ಐದು ವರ್ಷಕ್ಕೆ ಸಿಎಂ ಆಯ್ಕೆ ಮಾಡಿದ್ದಾರೆ. ಈಗ ಈ ಗೊಂದಲಕ್ಕೆ ಬ್ರೇಕ್ ಹಾಕಬೇಕಿದೆ. ಪಕ್ಷದಲ್ಲಿ ಈ ವಿಚಾರವಾಗಿ ಸಾಕಷ್ಟು ಗೊಂದಲ ಇದೆ. ಇದು ಬಗೆಹರಿಯಬೇಕಿದೆ ಎಂದು ಹೇಳಿದರು.

ಗೊಂದಲ ನಿವಾರಣೆ ಅಷ್ಟೇ. ಸ್ಥಾನ ಬದಲಾವಣೆ ಇಲ್ಲ. ಪಕ್ಷದಲ್ಲಿ, ಕಾರ್ಯಕರ್ತರಲ್ಲಿ ಹಾಗೂ ನಾಯಕರಲ್ಲಿ ಗೊಂದಲವಿದೆ. ಅದು ನಿವಾರಣೆ ಆಗಬೇಕು. ಎಲ್ಲಾ ರೀತಿಯ ಚರ್ಚೆಗಳಾಗಿವೆ. ಎಲ್ಲರೂ ಸಿಎಂ ಆಗಲು ಸಾಧ್ಯವಿಲ್ಲ. ಸೂಕ್ತ ಸಮಯದಲ್ಲಿ ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಈಗಂತೂ ಸಿಎಂ ಇದ್ದಾರೆ. ಬದಲಾವಣೆ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಅಭಿಪ್ರಾಯಪಟ್ಟರು.

ಸಿಎಂ ಟ್ವೀಟ್ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಟ್ವೀಟ್ ಮಾಡಿದ್ದ ಬಗ್ಗೆ ಅವರೇ ಹೇಳಬೇಕು. ಪಕ್ಷದಲ್ಲಿ ಸಮಸ್ಯೆ ಇದೆ, ಸರಿಯಾಗುತ್ತದೆ. ಬಿಜೆಪಿ ಅವರು ಭ್ರಷ್ಟಾಚಾರದ ಬಗ್ಗೆ ಬೇರೆಯವರ ಮೇಲೆ ಆರೋಪ ಮಾಡುತ್ತಾರೆ. ಅವರ ಎಂಎಲ್ಎ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಅವರೇ ತಮ್ಮ ಭ್ರಷ್ಟಾಚಾರದ ಬಗ್ಗೆ ಸಾಕ್ಷಿ ಕೊಟ್ಟಿದ್ದಾರೆ ಎಂದು ತಿರುಗೇಟು ನೀಡಿದರು.

## 'ಕೈನಿಂದಷ್ಟೇ' ದಲಿತ ಸಿಎಂ


**ಬೆಂಗಳೂರು: ದಲಿತ ಸಿಎಂ ಕಾರ್ಡ್ ಪ್ಲೇ ಮಾಡಿರುವ ಸಿಎಂ ಆಪ್ತ ಸಚಿವ ಮಹದೇವಪ್ಪ ವಿರುದ್ಧ ಡಿ.ಕೆ ಸುರೇಶ್ ಸೇರಿದಂತೆ ಡಿಕೆಶಿ ಆಪ್ತರು ಆಕ್ರೋಶ ವ್ಯಕ್ತಪಡಿಸಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಗೃಹಸಚಿವ ಪರಮೇಶ್ವರ್ ಅವರು, ದಲಿತರನ್ನು ಸಿಎಂ ಮಾಡುವುದು ಕಾಂಗ್ರೆಸ್ ಪಕ್ಷವೇ ಹೊರತು ಇನ್ಯಾರು ಮಾಡ್ತಾರೆ. ಯಾವಾಗ ದಲಿತ ಸಿಎಂ ಮಾಡಬೇಕು ಎಂದು** ಪುಟ 2ಕ್ಕೆ

## ಶಾಲೆಗಳಲ್ಲಿ ಮೊಬೈಲ್ ನಿಷೇಧಕ್ಕೆ ಚಿಂತನೆ

### ಪೋಷಕರಿಂದಲೂ ಒತ್ತಡವಿದೆ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ರಾಜ್ಯದ ಶಾಲೆಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸುವ ಬಗ್ಗೆ ಚಿಂತನೆ ಮಾಡಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ಮೊಬೈಲ್ ಬಳಕೆ ನಿಷೇಧಿಸುವ ಬಗ್ಗೆ ಪೋಷಕರಿಂದಲೂ ಒತ್ತಡವಿದೆ. ಹಲವು ದೇಶಗಳಲ್ಲಿ ಈಗಾಗಲೇ ಈ ಕ್ರಮ ಕೈಗೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಈ ವಿಷಯ ಚರ್ಚೆಯಾಗುತ್ತಿದೆ ಎಂದು ಹೇಳಿದರು.



ಶಾಲೆಗಳಲ್ಲಿ ಮಕ್ಕಳು ಮೊಬೈಲ್ ಬಳಕೆಗೆ ಕಡಿವಾಣ ಹಾಕುವ ವಿಚಾರವಾಗಿ ಕೇಳಿದಾಗ, ನಮ್ಮ ಶಾಲೆಗಳಲ್ಲಿ ಮೊಬೈಲ್ ನಿಷೇಧ ಮಾಡಿದ್ದೇವೆ ಪುಟ 2ಕ್ಕೆ

### ನಿಮಗೆ ಇಲ್ಲಿಂದಲೇ ನಮಸ್ಕಾರ!

**ಬೆಂಗಳೂರು: ದಲಿತರು ಸಿಎಂ ಆಗಲು ಅವಕಾಶ ಕೊಡಬೇಕು ಎಂದಿದ್ದ ಸಚಿವ ಎಚ್.ಸಿ.ಮಹದೇವಪ್ಪ ಅವರಿಗೆ ಇಲ್ಲಿಂದಲೇ ನಮಸ್ಕಾರ ಮಾಡುತ್ತೇನೆ. ಅವರು ನಮ್ಮ ರಾಷ್ಟ್ರೀಯ ನಾಯಕರು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಲೇವಡಿ ಮಾಡಿದರು. ಮಡಿಕೇರಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವ ಮಹದೇವಪ್ಪ ದಲಿತರು ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಇದ್ದಾರೆ. ಸದಾ ಕಾಂಗ್ರೆಸ್‌ನೊಂದಿಗೆ ಬೆನ್ನೆಲುಬಾಗಿ ನಿಂತಿರುವುದರಿಂದ ದಲಿತರಿಗೆ ಸಿಎಂ ನೀಡಬೇಕು ಎಂದಿದ್ದರು. ಮಹದೇವಪ್ಪನವರ ಈ ಹೇಳಿಕೆ ಕುರಿತು ಮಾಧ್ಯಮಗಳು ಕೇಳಿದ ಪ್ರಶ್ನೆಗೆ, ಮಹದೇವಪ್ಪ ನಮ್ಮ ರಾಷ್ಟ್ರೀಯ ನಾಯಕರು.** ಪುಟ 2ಕ್ಕೆ

## ತಂಬಾಕಿಗೆ ನ್ಯಾಯಯುತ ಬೆಲೆಗೆ ಸೂಚನೆ

### ಮೋಸ ಮಾಡಿದರೆ ಐಟಿಸಿ ಕಂಪನಿ ಗೋದಾಮು ಜಪ್ತಿ: ಸಚಿವ ವೆಂಕಟೇಶ್ ಎಚ್ಚರಿಕೆ

**ಮೈಸೂರು:** ಜಿಲ್ಲೆಯ ತಂಬಾಕು ಬೆಳೆಗಾರರಿಂದ ಐಟಿಸಿ ಕಂಪನಿಯು ನ್ಯಾಯಯುತ ಬೆಲೆ ಮೂಲಕ ಹರಾಜಿನಲ್ಲಿ ಉತ್ಪನ್ನ ಕೊಳ್ಳಬೇಕು. ರೈತರಿಗೆ ಅನ್ಯಾಯವಾದರೆ ಕಂಪನಿಯ ಗೋದಾಮುಗಳನ್ನು ಜಪ್ತಿ ಮಾಡಲಾಗುವುದು ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಎಚ್ಚರಿಸಿದರು.



ನಗರದಲ್ಲಿ ಸೋಮವಾರ ತಂಬಾಕು ಬೆಳೆಗಾರರು, ಜಿಲ್ಲಾಡಳಿತ, ತಂಬಾಕು ಮಂಡಳಿ ಹಾಗೂ ಕಾರ್ಖಾನೆ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಅವರು ಮಾತನಾಡಿದರು. ಹರಾಜಿನಲ್ಲಿ ಬೆಲೆ ಕುಸಿತದಿಂದ ಈಗಾಗಲೇ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಕಂಪನಿಯು ಉದ್ದೇಶಪೂರ್ವಕವಾಗಿ ಕಡಿಮೆ ಬೆಲೆಗೆ ಹರಾಜು ಮಾಡುವುದು, ಕಡಿಮೆ ಉತ್ಪನ್ನ ಕೊಳ್ಳುವುದು ಸರಿಯಲ್ಲ. ಹರಾಜು ಆರಂಭಗೊಂಡ ದಿನ ಇದ್ದ ಬೆಲೆ ಅಥವಾ ಅದಕ್ಕಿಂತ ಹೆಚ್ಚಿನ ದರದಲ್ಲಿ ಹರಾಜು ನಡೆಸಬೇಕು ಎಂದು ಸೂಚಿಸಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕೇಂದ್ರ ಸರ್ಕಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ತಂಬಾಕು ಉತ್ಪನ್ನಗಳಿಗೆ ಯಾವ ಪುಟ 2ಕ್ಕೆ


### ಸದ್ಯಕ್ಕೆ ಸಿಎಂ ಕುರ್ಚಿ ಖಾಲಿ ಇಲ್ಲ

**ಮೈಸೂರು:** ಡಾ.ಎಚ್.ಸಿ.ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ. ಅವರು ರಾಜ್ಯದ ಮುಖ್ಯಮಂತ್ರಿ ಆದರೆ ಸಂತೋಷ ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್ ಅಭಿಪ್ರಾಯಪಟ್ಟರು.

ನಗರದಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಸದ್ಯ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಖಾಲಿ ಆದ ಪುಟ 2ಕ್ಕೆ

## ಜಾಲಿ ರೈಡ್: ಯುವತಿ ಸಾವು

**ಹಾಸನ:** ಬುಲೆಟ್ ಬೈಕ್ ಚಲಾಯಿಸುವಾಗ ಹಂಪ್ಸ್ ಕಾಣದೇ ಯುವತಿಯವರು ರಸ್ತೆಗೆ ಹಾರಿ ಬಿದ್ದ ಪರಿಣಾಮ ಒಬ್ಬ ಯುವತಿ ಸಾವನ್ನಪ್ಪಿದ್ದಾರೆ. ಮತ್ತೊಬ್ಬರು ತೀವ್ರ ಗಾಯಗೊಂಡಿರುವ ಘಟನೆ ನಗರದ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ.



ಸತ್ಯಮಂಗಲ ಬಡಾವಣೆ ಪ್ರಿಯಾ (23) ಮೃತ ಯುವತಿ. ಯುವತಿ ಸ್ವಾತಿ (24) ಸ್ಥಿತಿ ಗಂಭೀರವಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ಪ್ರಿಯಾ ಖಾಸಗಿ ಕಾಲೇಜಿನಲ್ಲಿ ಎಂಸಿಎ ಫೈನಲ್ ಇಯರ್ ಓದುತ್ತಿದ್ದಳು. ಸ್ವಾತಿಗೆ ಕಳೆದ ನವೆಂಬರ್‌ನಲ್ಲಿ ಮದುವೆಯಾಗಿದೆ.

ಇಬ್ಬರೂ ಯುವತಿಯರು ಹೆಲ್ಮೆಟ್ ಧರಿಸದೇ ಬುಲೆಟ್ ಬೈಕ್‌ನಲ್ಲಿ ಜಾಲಿ ರೈಡ್‌ಗೆ ಹೊರಟಿದ್ದರು. ಪ್ರಿಯಾ ಬೈಕ್ ಚಲಾಯಿಸುತ್ತಿದ್ದರು. ಸ್ವಾತಿ ಹಿಂಬದಿ ಸೀಟ್‌ನಲ್ಲಿ ಕುಳಿತಿದ್ದಳು. ಈ ವೇಳೆ ಹಂಪ್ಸ್ ಕಾಣದೇ ಇಬ್ಬರು ರಸ್ತೆಗೆ ಹಾರಿ ಬಿದ್ದಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಸ್ವಾತಿಯನ್ನು ಬೆಂಗಳೂರಿನ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

## ಕೇಂದ್ರ ಮೇಲೆ ಗೂಬೆ ಬೇಡ: ರಾಜ್ಯಕ್ಕೆ ಯದುವೀರ್ ತಿರುಗೇಟು



**ಮೈಸೂರು:** ರಾಜ್ಯ ಸರ್ಕಾರ ಪ್ರತಿ ಕೆಲಸಕ್ಕೂ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಟೀಕಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ತಂಬಾಕಿಗೆ ಸೂಕ್ತ ಬೆಲೆ ನೀಡಬೇಕು ಎನ್ನುವುದು ರೈತರ ಬೇಡಿಕೆ. ತಂಬಾಕು ಬೆಲೆ ಸಮಸ್ಯೆಯನ್ನು ಕೇಂದ್ರ ಸರ್ಕಾರವೇ ಬಗೆಹರಿಸುತ್ತದೆ. ಪುಟ 2ಕ್ಕೆ

## ಕಾಂಗ್ರೆಸ್ ಶಾಸಕನ ಕಾರಿನಲ್ಲಿ ಪ್ರೀತಂಗೌಡ

### ಸಂಚಲನ ಸೃಷ್ಟಿಸಿದ ವಿಡಿಯೋ

**ಮೈಸೂರು/ಹಾಸನ:** ಮಾಜಿ ಶಾಸಕ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಅವರು ಕಾಂಗ್ರೆಸ್ ಸಖ್ಯ ಬೆಳೆಸಿದ್ದಾರೆಯೇ ?



ಈ ಪ್ರಶ್ನೆಗೆ ಪೂರಕವೆಂಬಂತೆ, ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ಗೌಡ ಅವರೊಂದಿಗೆ ಒಂದೇ ಕಾರಿನಲ್ಲಿ ಸಂಚರಿಸುತ್ತಿರುವ ವಿಡಿಯೋ ವೈರಲ್ ಆಗಿದೆ. ಖಾಸಗಿ ಕಾರ್ಯಕ್ರಮ ನಿಮಿತ್ತ ಲಲಿತ ಮಹಲ್ ಹೋಟೆಲ್ಗೆ ಭೇಟಿ ನೀಡಿದ್ದ ಪ್ರೀತಂಗೌಡ, ಶಾಸಕ ಹರೀಶ್ಗೌಡ ಅವರ ಪುಟ 2ಕ್ಕೆ

## ದಲಿತ ಸಿಎಂ ತಪ್ಪಿಸಿದ್ದೇ ಸಿದ್ದು

* ಪರಮೇಶ್ವರ್ ಸೋಲಿಸಿ, ಖರ್ಗೆಯನ್ನು ಓಡಿಸಿದರು: ಎಚ್‌ಡಿಕೆ ವಾಗ್ದಾಳಿ

**ರಾಯಚೂರು:** ಕಾಂಗ್ರೆಸ್‌ನಲ್ಲಿ ದಲಿತರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಿದವರೇ ಸಿದ್ದರಾಮಯ್ಯ. ಮಲ್ಲಿಕಾರ್ಜುನ ಖರ್ಗೆ ಅಥವಾ ಪರಮೇಶ್ವರ್ ಯಾವತ್ತೋ ಮುಖ್ಯಮಂತ್ರಿ ಆಗಬೇಕಿತ್ತು. ಅವರನ್ನು ಖಾಲಿ ಮಾಡಿಸಿ ಕಾಂಗ್ರೆಸ್ ಹತ್ತದಲ್ಲಿ ಸೇರಿಕೊಂಡಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಗೆ ಓಡಿಸಿದ ಸಿದ್ದರಾಮಯ್ಯ. ಪರಮೇಶ್ವರ ಅವರನ್ನು ಸೋಲಿಸಿ ಅಧ್ಯಕ್ಷರಿದ್ದಾಗಲೇ ಮನೆಗೆ ಕಳುಹಿಸಿ ಸಿದ್ದರಾಮಯ್ಯ ಸಿಎಂ ಆದರು. ಕಾಂಗ್ರೆಸ್‌ನಲ್ಲಿ ದಲಿತರು ಮುಖ್ಯಮಂತ್ರಿ ಆಗುವುದಿದ್ದರೆ ಯಾವುತ್ತೋ ಆಗುತ್ತಿತ್ತು ಎಂದು ಟೀಕಿಸಿದರು.



ನಾನು ಯಾರ ಬೆನ್ನಿಗೂ ಚೂರಿ ಹಾಕಿಲ್ಲ. ಯಾವಾಗ ದೇವೇಗೌಡರ ಬೆನ್ನಿಗೆ ಚೂರಿ ಹಾಕೋಕೇ ಹೋದ್ರೋ, ಆಗ ಸಿದ್ದರಾಮಯ್ಯ ಮನೆಗೆ ಹೋದರು. ಸಿಎಂ ಸಿದ್ದರಾಮಯ್ಯ ಇವತ್ತು ಮಾನಸಿಕ ಅಸಮತೋಲನಕ್ಕೆ ಒಳಗಾಗಿದ್ದಾರೆ. ಸಿಎಂ ಖುರ್ಚಿ ಉಳಿಸಿಕೊಳ್ಳೋದಕ್ಕೆ ಯಾವ್ಯಾವುದೋ ಹೆಸರು ಪುಟ 2ಕ್ಕೆ

## ಮಾ.11ರಿಂದ ವೈದ್ಯರ ಮುಷ್ಕರ

**ಬೆಂಗಳೂರು:** ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಮಾ.11ರಿಂದ ಮುಷ್ಕರ ಆರಂಭಿಸಲು ಮುಂದಾಗಿದೆ.

ಸಮರ್ಪಕ ಔಷಧ ಸರಬರಾಜು, ವೈದ್ಯರ ನೇಮಕ, ಬಡ್ತಿ ಸಹಿತ ನಮ್ಮ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸದರೂ ಪ್ರಯೋಜನವಾಗಿಲ್ಲ. ಈ ಕಾರಣದಿಂದ ಮುಷ್ಕರ ಅನಿವಾರ್ಯವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಪ್ರವೇಶಿಸಿ ಬೇಡಿಕೆ ಈಡೇರಿಸಲು ಗಮನ ಹರಿಸಬೇಕು ಎಂದು ವೈದ್ಯಾಧಿಕಾರಿಗಳ ಸಂಘ ತಿಳಿಸಿದೆ.

ಸಂಘದ ಅಧ್ಯಕ್ಷ ಡಾ.ರವೀಂದ್ರನಾಥ್ ಮೇಟಿ ಮತ್ತು ನೌಕರರ ಕೇಂದ್ರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾ.11ರಿಂದ 15ರ ವರೆಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಆಸ್ಪತ್ರೆ, ಸಮುದಾಯ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಪ್ಪು ಪಟ್ಟಿ ಧರಿಸಿ ಮುಷ್ಕರ ನಡೆಸುತ್ತೇವೆ. ಈ ವೇಳೆ ಹೊರ ರೋಗಿಗಳ ಚಿಕಿತ್ಸೆ ಸ್ಥಗಿತಗೊಳಿಸಿ ತುರ್ತು ಸೇವೆಗಳನ್ನು ಮಾತ್ರ ಪುಟ 2ಕ್ಕೆ

## ಬೆದರಿಕೆ: ಸ್ನೇಹಮಯಿ ಕೃಷ್ಣ ವಿರುದ್ಧ ದೂರು

**ಬೆಂಗಳೂರು:** ಮುಡಾ ಹಗರಣದ ದೂರುದಾರ, ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಮತ್ತೊಂದು ಎಫ್ಐಆರ್ ದಾಖಲಾಗಿದೆ. ಪವಿತ್ರ ಎಂಬ ಮಹಿಳೆ ದೂರು ಕೊಟ್ಟಿದ್ದಾರೆ. ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.



ಪ್ರೊ.ಮೈಲಾರಪ್ಪ ವಿರುದ್ಧ ಕೊಟ್ಟಿರುವ ಕೇಸ್ ವಾಪಸ್ ಪಡೆದುಕೊಳ್ಳುವಂತೆ ಸ್ನೇಹಮಯಿ ಕೃಷ್ಣ ಬೆದರಿಕೆ ಹಾಗೂ ಒತ್ತಡ ಹಾಕುತ್ತಿದ್ದಾರೆಂದು ಪುಟ 2ಕ್ಕೆ

## ಒಳಮೀಸಲಾತಿ ಗೊಂದಲ ಪರಿಹರಿಸಿ

### * ರಾಜ್ಯಪಾಲರಿಗೆ ಬಿಜೆಪಿ ನಾಯಕರ ನಿಯೋಗದ ದೂರು

**ಬೆಂಗಳೂರು:** ಒಳಮೀಸಲಾತಿಯಲ್ಲಿ ಜಾರಿಯಲ್ಲಿರುವ ಗೊಂದಲ ನಿವಾರಣೆ ಮಾಡುವಂತೆ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ದೂರು ಸಲ್ಲಿಸಿತು.

ಬಿಜೆಪಿ ಸಂಸದ ಗೋವಿಂದ್ ಕಾರಜೋಳ ನೇತೃತ್ವದಲ್ಲಿ ನಿಯೋಗ ತೆರಳಿ ರಾಜ್ಯಪಾಲರಿಗೆ ದೂರು ನೀಡಿದೆ. ಬಳಿಕ ಪ್ರತಿಕ್ರಿಯೆ ನೀಡಿದ ಗೋವಿಂದ್ ಕಾರಜೋಳ, ಸರ್ಕಾರ ಸಮರ್ಪಕವಾಗಿ ಒಳ ಮೀಸಲಾತಿ ಜಾರಿ ಮಾಡಿಲ್ಲ. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಆಗಿದೆ. 25–30 ವರ್ಷಗಳಿಂದ ಮೀಸಲಾತಿಗಾಗಿ ಹೋರಾಟ ಮಾಡಿದ್ದರು. ಆದರೆ, ಸಿದ್ದರಾಮಯ್ಯ ಸರ್ಕಾರ ಏಕಪಕ್ಷೀಯವಾಗಿ ನಿರ್ಧಾರ ಮಾಡಿದೆ. ಯಾವುದನ್ನೂ ನ್ಯಾಯಯುತವಾಗಿ ಮಾಡಿಲ್ಲ ಅಲೆಮಾರಿಗಳಿಗೆ ಅನ್ಯಾಯ ಆಗಿದೆ ಎಂದು ಕಿಡಿಕಾರಿದರು.




ಸರ್ಕಾರ ನಾಗಮೋಗನ್ ದಾಸ್, ಮಾಧುಸ್ವಾಮಿ ಯಾವುದೇ ವರದಿ ಜಾರಿ ಮಾಡಿಲ್ಲ. ಅಲೆಮಾರಿ ಜನಾಂಗದವರಿಗೆ ಸಿದ್ದರಾಮಯ್ಯ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ಸರ್ಕಾರ ಆರ್ಥಿಕವಾಗಿ ದಿವಾಳಿ ಆಗಿದೆ. 2.85 ಲಕ್ಷ ಹುದ್ದೆ ಖಾಲಿ ಇವೆ, ಒಳಮೀಸಲಾತಿ ಅಂತ ಗೊಂದಲ ಸೃಷ್ಟಿ ಮಾಡಿ ನೇಮಕಾತಿ ಮಾಡ್ತಿಲ್ಲ. ನೇಮಕಾತಿ ಪರವಾಗಿ ಬಿಜೆಪಿ ಇದೆ. ಕೂಡಲೇ ನೇಮಕಾತಿ ಪ್ರಾರಂಭ ಮಾಡಬೇಕು ಎಂದು ಆಗ್ರಹಿಸಿದರು.

ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರ ಪಾಲನೆ ಮಾಡಬೇಕು. ಒಳಮೀಸಲಾತಿ ವರದಿ ಗಮನ ಇಟ್ಟುಕೊಂಡು ಅನುಷ್ಠಾನ ಮಾಡಬೇಕಿತ್ತು. ಆದರೆ ಚರ್ಚೆ ಇಲ್ಲದೇ ಬಿಲ್ ಪಾಸ್ ಮಾಡಿರೋದು ಸರಿಯಲ್ಲ. ಎಸ್‌ಸಿ, ಎಸ್‌ಟಿ ಹಣವನ್ನು ಗ್ಯಾರಂಟಿಗೆ ಬಳಕೆ ಮಾಡಿದೆ. ಇದು ಸರಿಯಲ್ಲ, ಸರ್ಕಾರ ದಲಿತರ ಹಣ ದಲಿತರಿಗೆ ಬಳಕೆ ಮಾಡಬೇಕು ಇಲ್ಲದೆ ಹೋದರೆ ಹೋರಾಟ ಮಾಡ್ತೇವಿ. ರಾಜ್ಯಪಾಲರಿಗೆ ದೂರು ಕೊಡಲಾಗಿದೆ. ಅಲೆಮಾರಿಗಳಿಗೆ ಶೇ.1 ಮೀಸಲಾತಿ ಕೊಡಬೇಕು. ನೇಮಕಾತಿ ಪ್ರಕ್ರಿಯೆ ನಿಲ್ಲಿಸಬಾರದು, ಬಡ್ತಿ ಕೊಡೋದು ನಿಲ್ಲಿಸಬಾರದು ಎಂದು ಒತ್ತಾಯಿಸಿದರು.

## ರೈತರಿಗೆ ಸೂರ್ಯನಿಂದ ಹಣದ ಹೊಳೆ

ಎಚ್.ಆರ್.ಶ್ರೀಶಾ

ಇನ್ನುಮುಂದೆ ರೈತರಿಗೆ ಸೂರ್ಯನಿಂದ ಹೊಳೆ ಹರಿಯಲಿದೆ. ಇಡೀ ಜಗತ್ತು ಈಗ ಸೋಲಾರ್ ಫಲಕದ ಕಡೆ ತಿರುಗಿರುವುದರಿಂದ ಯಾವ ಭೂಮಿಯೂ ಬಂಜರಲ್ಲ. ಅಲ್ಲಿ ಸೋಲಾರ್ ಫಲಕ ಅಳವಡಿಸಿದರೆ ಸಾಕು. ವಿದ್ಯುತ್ ಉತ್ಪಾದನೆಯಾಗುತ್ತದೆ. ಅದನ್ನು ಮಾರಾಟ ಮಾಡಿದರೆ ರೈತ ಬರಗಾಲದಲ್ಲೂ ಬದುಕಿಕೊಳ್ಳಬಹುದು. ಈಗ ಜಗತ್ತಿನಲ್ಲಿ ಅತಿ ಕಡಿಮೆ ದರದಲ್ಲಿ ವಿದ್ಯುತ್ ಸಿಗುವುದು ಸೋಲಾರ್‌ನಿಂದ ಮಾತ್ರ. ಹೀಗಾಗಿ ಎಲ್ಲ ದೇಶಗಳು ಇದರತ್ತ ತಿರುಗಿ ನೋಡುತ್ತಿವೆ. ಪೆಟ್ರೋಲ್, ಡೀಸೆಲ್ ಕಾಲ ಮುಗಿಯಿತು. ಈಗ ಸೋಲಾರ್ ಕಾಲ. ಈ ವಿಷಯದಲ್ಲಿ ಚೀನ ನಮಗಿಂತ ಮುಂದೆ ಇದೆ. ಅದು ಬೆಟ್ಟಗಳನ್ನೂ ಬಿಟ್ಟಿಲ್ಲ. ಪರಿಸರ ಸಮತೋಲನಕ್ಕೆ ಅಡ್ಡಿಯಾಗುವ ರೀತಿಯಲ್ಲಿ ಸೋಲಾರ್ ಫಲಕಗಳನ್ನು ಅಳವಡಿಸುತ್ತಿದೆ.



ಇದರಿಂದ ಬ್ಯಾಟರಿ ಚಾಲಿತ ವಾಹನಗಳು ಅಧಿಕಗೊಳ್ಳುತ್ತಿವೆ. ಈಗ ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳು ಎಲ್ಲ ಕಡೆ ಜನಪ್ರಿಯಗೊಳ್ಳುತ್ತಿವೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಸಘ ಬೆಳಗಾವಿ ನಗರಗಳಲ್ಲದೆ ಹಾಸನ. ತುಮಕೂರು, ಚಿಕ್ಕಮಗಳೂರು ಸೇರಿದಂತೆ ಚಿಕ್ಕ ನಗರಗಳಿಗೂ ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳು ಕಾಲಿಡುತ್ತಿವೆ. ಇವುಗಳಿಗೆ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದು ಕಷ್ಟದ ಕೆಲಸವಾಗಿದೆ. ಬೆಸ್ಕಾಂ ಸೇರಿದಂತೆ ಹಲವು ವಿತರಣ ಕಂಪನಿಗಳು ಸಾರ್ವಜನಿಕ ಸ್ಥಳಗಳಲ್ಲಿ ಇವಿ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದರೂ ಇದಕ್ಕೆ ಜನರ ಪ್ರತಿಕ್ರಿಯೆ ನೀರಸವಾಗಿದೆ. ಇದಕ್ಕೆ ಪ್ರಮುಖ ಕಾರಣ ಚಾರ್ಜಿಂಗ್ ಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದೆ ಇರುವುದು ಮತ್ತು ಈ ಕೇಂದ್ರಗಳಲ್ಲಿ ಚಾರ್ಜಿಂಗ್ ಮಾಡಿಕೊಂಡಲ್ಲಿ ಹೆಚ್ಚುವರಿಯಾಗಿ ಜಿಎಸ್‌ಟಿ ಪಾವತಿ ಮಾಡಬೇಕು. ಅದೇ ಚಾರ್ಜಿಂಗ್ ಮನೆಯಲ್ಲೇ ಮಾಡಿಕೊಂಡಲ್ಲಿ ಹೆಚ್ಚುವರಿ ಹಣ ನೀಡಬೇಕಿಲ್ಲ. ಮನೆ ದೀಪಕ್ಕೆ ಬಳಸುವ ವಿದ್ಯುತ್ ಇದಕ್ಕೂ ಬಳಕೆಯಾಗುತ್ತದೆ. ಪುಟ 2ಕ್ಕೆ

# ವಿವಿ ಸಂಜೆ ಕಾಲೇಜು ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ



ಮೈಸೂರು: ಸ್ವಚ್ಛತೆ ,ಸರ್ಕಾರದ ಕೆಲಸ ಎಂಬ ಮನೋಭಾವ ಗ್ರಾಮೀಣ ಜನರಲ್ಲಿಯೂ ಬಂದಿದ್ದು, ಈ ಬಗ್ಗೆ ಸರಿಯಾದ ಜಾಗೃತಿ ಮೂಡಿಸಬೇಕು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಕರೆ ನೀಡಿದರು.

ಮಹಾರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ವತಿಯಿಂದ ನಂಜನಗೂಡು ತಾಲೂಕು ಬೊಕ್ಕಹಳ್ಳಿ ಹಾಗೂ ಬೊಕ್ಕಹಳ್ಳಿ ಹೊಸೂರಿನಲ್ಲಿ ಏರ್ಪಡಿಸಿರುವ ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೊದಲೆಲ್ಲಾ ಗ್ರಾಮಸ್ಥರು ತಮ್ಮ ಮನೆಗಳ ಅಕ್ಕಪಕ್ಕದ ಪ್ರದೇಶವನ್ನು ಸ್ವಚ್ಛಗೊಳಿಸುತ್ತಿದ್ದರು. ಈಗ ಗ್ರಾಮ ಪಂಚಾಯ್ತಿಯವರು ಮಾಡಲಿ ಎಂಬ ಮನೋಭಾವ ತೋರಿಸುತ್ತಿದ್ದಾರೆ. ಹೀಗಾಗಿ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಕೇವಲ ಸರ್ಕಾರದ ಕೆಲಸ ವಲ್ಲ. ಇದರಲ್ಲಿ ನಿಮ್ಮ ಜವಾಬ್ದಾರಿಯೂ ಇದೆ ಎಂದು ತಿಳಿಸಿಕೊಡಿ ಎಂದರು. ಮೊದಲೆಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಮಣ್ಣಿನ ರಸ್ತೆಗಳಿದ್ದವು. ಮನೆಗಳಿಂದ ಹೊರಬರುತ್ತಿದ್ದ ನೀರು ಅದರಲ್ಲಿ ಇಂಗುತ್ತಿತ್ತು. ಆದರೆ ಈಗ ಎಲ್ಲೆಡೆ ಡಾಂಬರು, ಸಿಮೆಂಟ್‌ರಸ್ತೆಗಳಾಗಿವೆ. ಚರಂಡಿಗಳು ಕೂಡ ಆಗಿವೆ. ಇದರಿಂದ ನೀರು ರಸ್ತೆಗೆ ಬರುತ್ತದೆ. ಚರಂಡಿಗಳಲ್ಲಿ ಪ್ಲಾಸ್ಟಿಕ್‌ವಸ್ತುಗಳನ್ನು ಹಾಕುತ್ತಿದ್ದಾರೆ. ಈ ಬಗ್ಗೆಯೂ ಅವರಿಗೆ ಮನದಟ್ಟು ಮಾಡಿಕೊಡಿ ಎಂದು ಹೇಳಿದರು.

ಗ್ರಾಮದ ಮುಖಂಡ ಸೋಮಸುಂದರ್ ಮಾತನಾಡಿದರು. ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ತಿಮ್ಮಯ್ಯ ಮಾತನಾಡಿದರು. ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಗ್ರಾಮದ ಮುಖಂಡರಾದ ರೇವಣ್ಣ, ಗೋವಿಂದನಾಯಕ, ವಿಜಯಕುಮಾರ್, ಬಸವರಾಜು ಮುಖ್ಯಅತಿಥಿಗಳಾಗಿದ್ದರು. ಮಹಾರಾಜ ಕಾಲೇಜು ಎನ್‌ಎಸ್‌ಎಸ್‌ಕಾರ್ಯಕ್ರಮಾಧಿಕಾರಿ ಡಾ.ಎಸ್. ಕೃಷ್ಣಪ್ಪ ಸ್ವಾಗತಿಸಿದರು. ಮತ್ತೊರ್ವ ಕಾರ್ಯಕ್ರಮಾಧಿಕಾರಿ ಡಾ.ಮಧುಸೂದನ್ ಪೂರೀಗಾಲಿ, ಸಿದ್ದರಾಜು ಹಾಗೂ ಆನಂದ್‌ಪ್ರಾರ್ಥಿಸಿದರು. ವಿವಿ ಸಂಜೆ ಕಾಲೇಜಿನ ಕಾರ್ಯಕ್ರಮಾಧಿಕಾರಿ ಡಾ.ಆರ್. ನಿಂಗರಾಜು ಕಾರ್ಯಕ್ರಮ ನಿರೂಪಿಸಿದರು. ಸಹ ಶಿಬಿರಾಧಿಕಾರಿ ಡಾ.ಬಿ.ಶಿವಶಂಕರ್, ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಇದ್ದರು. ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

# ಒಳಮೀಸಲು ಜಾರಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು: ಮಾದಿಗ ವಿವಿಧ ಸಂಘಟನೆಗಳ ಒಕ್ಕೂಟದ ವತಿಯಿಂದ ಶಿವಣ್ಣ ನೇತೃತ್ವದಲ್ಲಿ ಸಂಪೂರ್ಣ ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಪ್ರತಿಭಟಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿದ ಸಂಘಟನೆ ಕಾರ್ಯಕರ್ತರು ತಹಸೀಲ್ದಾರ್ ಶಿವಕುಮಾರ್‌ಗೆ ಹಕ್ಕೊತ್ತಾಯದ ಮನವಿ ಪತ್ರ ಸಲ್ಲಿಸಿದರು. ನೇರ ನೇಮಕಾತಿಯ ಜೊತೆಗೆ ಪದೋನ್ನತಿಯಲ್ಲೂ ಹಾಗೂ ಬ್ಯಾಕ್‌ಲಾಗ್, ಕೆಐಎಡಿಬಿ, ಬಿಡಿಎ ಹಾಗೂ ಸರ್ಕಾರಿ ಗುತ್ತಿಗೆ ಸೇರಿದಂತೆ ಎಲ್ಲಾ ರಂಗಗಳಲ್ಲಿ ಒಳಮೀಸಲಾತಿ ಜಾರಿಮಾಡಬೇಕು. ಎಸ್ ಸಿಪಿ, ಟಿಎಸ್‌ಪಿ ಅನುದಾನದಲ್ಲೂ ಸಹ 6:6:5ರ ಅನುಪಾತದಲ್ಲಿ ಹಂಚಿಕೆಯಾಗಬೇಕು. ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಶೇ.1ರಷ್ಟು ಮೀಸಲಾತಿಯೊಂದಿಗೆ ಪ್ರತ್ಯೇಕ ನಿಗಮ ಹಾಗೂ ಪ್ರತ್ಯೇಕ ಪ್ಯಾಕೇಜ್ ಘೋಷಿಸಬೇಕು. ಶಾಶ್ವತ ಆಯೋಗ ನೇಮಕ ಹಾಗೂ ಮೀಸಲಾತಿ ಹೆಚ್ಚಳಕ್ಕೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕು.

ಒಳಮೀಸಲಾತಿ ಹೋರಾಟಗಾರರ ಮೇಲಿನ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು. ಆದಿ ಜಾಂಬವ ಅಭಿವೃದ್ಧಿ ನಿಗಮ, ಚರ್ಮ ಕೈಗಾರಿಕಾ ಅಭಿವೃದ್ಧಿ ಮಂಡಳಿ(ಅಡ್ಡರ್), ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಗೆ 'ತಲಾ 2 ಸಾವಿರ ಕೋಟಿ ಅನುದಾನ ಒದಗಿಸಬೇಕೆಂದು ಕೋರಿದರು.

ಮೊದಲ ಪುಟದಿಂದ

## ನಾಲ್ವರ ಬಂಧನ

ಮೈಸೂರು: ನಗರದಲ್ಲಿ ಅಕ್ರಮವಾಗಿ ಮಾರಾಟ ಮತ್ತು ಸಾಗಾಟ ಮಾಡುತ್ತಿದ್ದ 10,30,800 ಮೌಲ್ಯದ ನಿಷೇಧಿತ ಮಾದಕವಸ್ತು ಎಂ.ಡಿ.ಎಂ.ಎ ಮತ್ತು 8 ಲಕ್ಷ ಮೌಲ್ಯದ ಇನೋವಾ ಕಾರನ್ನು ಪಡಿಸಿಕೊಂಡು ನಾಲ್ವರು ಆರೋಪಿಗಳನ್ನು ಸಿ.ಸಿ.ಬಿ. ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಗರದ ಉಮರ್‌ಖಾಯಂ ರಸ್ತೆಯಲ್ಲಿ ಕೆಎ–05, ಎನ್‌ಕೆ–7805 ಇನ್ನೋವ ಕಾರನ್ನು ತಪಾಸಣೆ ಮಾಡಿದ್ದಾರೆ. ಕಾರಿನಲ್ಲಿದ್ದ 4 ಜನರನ್ನು ವಶಕ್ಕೆ ಪಡೆದುಕೊಂಡು ಬೆಂಗಳೂರು ನಿವಾಸಿ ನುಹೇದ್ ಖಾನ್ ಬಳಿ ಎಂ.ಡಿ.ಎಂ.ಎ. ಪೆಡ್ಲರ್ ಜಾವೀದ್‌ಗೆ ಸೇರಿದ 51 ಗ್ರಾಂ, ಕಾರಿನ ಡ್ಯಾಶ್ ಬೋರ್ಡ್ ನಲ್ಲಿದ್ದ 31 ಗ್ರಾಂ 13 ಮಿಲಿ, ಜಾವೀದ್ ಬಳಿ 6 ಗ್ರಾಂ 40 ಮಿಲಿ. ಹಾಗೂ ಜಿಯಾವುಲ್ಲಾನಿಂದ 15 ಗ್ರಾಂ 50 ಮಿಲಿ ಎಂ.ಡಿ.ಎಂ.ಎ. 10,40,000 ರೂ. ಮೌಲ್ಯವುಳ್ಳ ನಿಷೇಧಿತ ಮಾದಕವಸ್ತು ಮತ್ತು ಕೃತ್ಯಕ್ಕೆ ಬಳಸುತ್ತಿದ್ದ 8.00,000 ರೂ ಮೌಲ್ಯವುಳ್ಳ ಇನೋವಾ ಕಾರ್ ಹಾಗೂ 5 ಮೊಬೈಲ್‌ಗಳು ಸೇರಿ ಇತರೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಎಸಿಪಿ ಮಹಮ್ಮದ್ ಶರೀಫ್ ರಾವುತರ್ ನೇತೃತ್ವದಲ್ಲಿ ಸೋಮವಾರ ಸಿಸಿಬಿ ಘಟಕದ ಅಧಿಕಾರಿ ಪಿಎಸ್‌ಐ ಕೆ.ಲೇಪಾಕ್ಷ, ಆರ್.ಜೋತ್ಸಾರಾಜ್, ರೇವಣಾಸಿದ್ದಪ್ಪ ತಂಡ ಕಾರ್ಯಾಚರಣೆ ನಡೆಸಿದೆ.

## ಮೊಬೈಲ್ ನಿಷೇಧಕ್ಕೆ ಚಿಂತನೆ

ಯಾವ ರೀತಿ ಮೊಬೈಲ್ ಬಳಕೆ ದುರುಪಯೋಗವಾಗುತ್ತಿದೆ ಎಂದು ಬಹಿರಂಗಗೊಳಿಸಲು ಆಗುವುದಿಲ್ಲ. ಅದಕ್ಕೆ ಈ ವಿಚಾರವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದರು. ರಾಷ್ಟ್ರೀಯ ನೀರು ಗುಣಮಟ್ಟ ಪ್ರಮಾಣಿತ ಸಂಸ್ಥೆಯು ಬೆಂಗಳೂರು ಕೆರೆಗಳ ನೀರು ಕುಡಿಯಲು ಅರ್ಹವಲ್ಲ ಎಂದು ನೀಡಿರುವ ವರದಿ ಬಗ್ಗೆ ಕೇಳಿದಾಗ, ಬೆಂಗಳೂರಿನ ಕೆರೆ ನೀರನ್ನು ಕುಡಿಯಲು ಹಾಗೂ ಸ್ನಾನಕ್ಕೆ ಬಳಸಿ ಎಂದು ಸರ್ಕಾರ ಹೇಳಿಲ್ಲ. ಈ ಕೆರೆಗಳು ಇರುವುದು ಅಂತರ್ಜಲ ಹೆಚ್ಚಳ ಮಾಡಲು. ತಿಪ್ಪಗೊಂಡನಹಳ್ಳಿ ಕೆರೆ ನೀರನ್ನು ಜಲ ಮಂಡಳಿಯಿಂದ ಶುದ್ಧಿ ಮಾಡಲಾಗುತ್ತಿದೆ. ಬೆಂಗಳೂರಿನ ಕೆರೆಗಳ ನೀರು ಕುಡಿಯಲು, ಸ್ನಾನ ಮಾಡಲು ಅಲ್ಲ ಎಂದು ಸ್ಪಷ್ಟಪಡಿಸಿದರು. .

### ನಿಮಗೆ ಇಲ್ಲಿಂದಲೇ ನಮಸ್ಕಾರ!

**ಅವರಿಗೆ ಇಲ್ಲಿಂದಲೇ ನಮಸ್ಕಾರ ಮಾಡುತ್ತೇನೆ ಎಂದು ಡಿಕೆಶಿ ತಲೆಬಾಗಿ ನಮಸ್ಕರಿಸಿದರು. ಇದೇ ವೇಳೆ ಕಾಂಗ್ರೆಸ್‌ನಲ್ಲಿ ಮಾತ್ರ ಒಕ್ಕಲಿಗರಿಗೆ ಸಿಎಂ ಆಗಲು ಅವಕಾಶ ಎಂಬ ಸಿಎಂ ಹೇಳಿಕೆ ವಿಚಾರದ ಬಗ್ಗೆ ಡಿಕೆಶಿ ಯಾವುದೇ ಪ್ರತಿಕ್ರಿಯೆ ನೀಡದೇ ತೆರಳಿದರು.**

## ಸದ್ಯಕ್ಕೆ ಸಿಎಂ ಕುರ್ಚಿ ಖಾಲಿ ಇಲ್ಲ

ಮೇಲೆ ದಲಿತ, ಲಿಂಗಾಯತ, ಒಕ್ಕಲಿಗ, ಕುರುಬ.. ಹೀಗೆ ಯಾವುದಾದರೂ ಸಮುದಾಯದ ಒಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದು ವ್ಯಂಗ್ಯವಾಡಿದರು. ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಸಫಾರಿಯನ್ನು ರಾಜ್ಯ ಸರ್ಕಾರ ಏಕಾಏಕಿ ಪುನರಾರಂಭ ಮಾಡಿಲ್ಲ. ತಜ್ಞರ ಸಮಿತಿ ಮಾಡಿ, ಚರ್ಚಿಸಿಯೇ ತೀರ್ಮಾನ ತೆಗೆದುಕೊಂಡಿದೆ. ರೈತರು ಪ್ರತಿಭಟನೆಗೆ ಮುಂದಾದರೆ ಏನನ್ನು ಹೇಳಲಾಗದು ಎಂದು ಹೇಳಿದರು.

## ನ್ಯಾಯಯುತ ಬೆಲೆಗೆ ಸೂಚನೆ

ಪ್ರಮಾಣದ ತೆರಿಗೆ ಇದೆಯೋ ಅಷ್ಟೇ ಪ್ರಮಾಣದ ತೆರಿಗೆಯನ್ನು ದೇಶದಲ್ಲಿ ವಿಧಿಸುತ್ತಿದೆ. ಹೀಗಾಗಿ ತೆರಿಗೆಯಲ್ಲಿ ವ್ಯತ್ಯಾಸವಾಗದು. ರೈತರನ್ನು ತಂಬಾಕಿನಿಂದ ಬೇರೆ ಬೆಳೆಗಳಿಗೆ ಪರಿವರ್ತಿಸುವ ಕುರಿತು ಪೈಲಟ್ ಯೋಜನೆಗಳ ಅವಶ್ಯಕತೆ ಇದೆ. ಈ ಸಂಬಂಧ ಚರ್ಚೆಗೆ ಕೇಂದ್ರ ಸರ್ಕಾರದ ಬಳಿಗೆ ನಿಯೋಗ ಕರೆದೊಯ್ಯಲಾಗುವುದು ಎಂದು ತಿಳಿಸಿದರು. ಶಾಸಕರಾದ ಜಿ.ಡಿ.ಹರೀಶ್ ಗೌಡ, ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿ.ಪಂ. ಸಿಇಒ ಯುಕೇಶ್‌ಕುಮಾರ್, ರಾಜ್ಯ ರೈತ ಸಂಘ, ತಂಬಾಕು ಮಂಡಳಿ ಹಾಗೂ ಐಟಿಸಿ ಕಂಪನಿ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ರಾಜ್ಯಕ್ಕೆ ಯದುವೀರ್ ತಿರುಗೇಟು

ಈ ವಿಚಾರವಾಗಿ ರಾಜ್ಯ ಸರ್ಕಾರದ ಬಗ್ಗೆ ಏನು ಹೇಳಿಲ್ಲ ಎಂದು ಹೇಳಿದರು. ಯೋಜನೆಗಳಿಗೆ ಭೂಮಿ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರ ದ್ವಂದ್ವ ನಿಲುವು ಅನುಸರಿಸುತ್ತಿದೆ. ಎ ಚ್‌ಎಂಟಿ ಕಾರ್ಖಾನೆ ಅಭಿವೃದ್ಧಿಗೆ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಮುಂದಾದಾಗ ರಾಜ್ಯ ಸರ್ಕಾರ ಮರಗಳ ಹೆಸರಿನಲ್ಲಿ ವಿರೋಧ ಮಾಡಿತ್ತು. ಆದರೆ ತಿ.ನರಸೀಪುರದಲ್ಲಿ ಕೆಎಸ್‌ಐಸಿ ಜಾಗದಲ್ಲಿ ಸಾಕಷ್ಟು ಮರಗಿಡಗಳಿದ್ದರೂ ಕ್ರೀಡಾಂಗಣ ನಿರ್ಮಾಣಕ್ಕೆ ನೀಡಿದೆ. ಈ ಜಾಗವನ್ನು ಕೆಎಸ್‌ಐಸಿ ಅಭಿವೃದ್ಧಿಗೇ ಬಳಸಬೇಕು. ಇದಕ್ಕಾಗಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಮುಖ್ಯಮಂತ್ರಿ ಕುರ್ಚಿಗಾಗಿ ಕಾದಾಟ ಕಾಂಗ್ರೆಸ್‌ನ ಆಂತರಿಕ ವಿಚಾರ. ಆದರೆ ಅದರಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆ ಆಗಿದೆ ಎಂದು ಅಭಿಪ್ರಾಯಪಟ್ಟರು.

# ಲಸಿಕೆಯಿಂದ ತಡೆಗಟ್ಟಲು ಸಾಧ್ಯ

## ಡಾ.ಪ್ರದೀಪ್ ಹೇಳಿಕೆ | ಗರ್ಭಕಂಠ ಕ್ಯಾನ್ಸರ್ ರೋಗ | ಚಾ.ನಗರ ಸಿಮ್ಸ್ ಅಸ್ಪತ್ರೆಯಲ್ಲಿ ಪ್ರಸೂತಿ ಮತ್ತು ಸ್ತ್ರೀ ರೋಗ ಹಾಗೂ ಸರ್ವೈಕಲ್ ಕ್ಯಾನ್ಸರ್ ಕುರಿತು ಕಾರ್ಯಾಗಾರ

ಚಾಮರಾಜನಗರ, ಸ್ತ್ರೀಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಗರ್ಭಕಂಠ ಕ್ಯಾನ್ಸರ್ ಅನ್ನು ಪ್ರಾಥಮಿಕ ಹಂತದಲ್ಲಿಯೇ ತಿಳಿದು ಲಸಿಕೆ ಹಾಕುವುದು ಮತ್ತು ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಂಡರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ ಎಂದು ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಮುಖ್ಯಸ್ಥ ಡಾ. ಪ್ರದೀಪ್ ತಿಳಿಸಿದರು.

ನಗರದ ಸಿಮ್ಸ್ ಆಸ್ಪತ್ರೆ, ಮೈಸೂರಿನ ನಾರಾಯಣ ಹೆಲ್ಸ್ ಕೇರ್ನ ಸಹಭಾಗಿತ್ವದಲ್ಲಿ ನಡೆದ ಪ್ರಸೂತಿ ಮತ್ತು ಸ್ತ್ರೀ ರೋಗ ಹಾಗೂ ಸರ್ವೈಕಲ್ ಕ್ಯಾನ್ಸರ್ ಕುರಿತು ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಸ್ತ್ರೀಯಲ್ಲಿ ಗರ್ಭಕಂಠ ಕ್ಯಾನ್ಸರ್ ಹೆಚ್ಚಾಗುತ್ತದೆ. ಅದಲ್ಲಿಯೂ ಸಹ ಭಾರತದಲ್ಲಿ ಇದರ ಪ್ರಮಾಣ ಜಾಸ್ತಿ ಇದೆ. ಈ ರೋಗಕ್ಕೆ ತುತ್ತಾಗುವ ಸ್ತ್ರೀಯರಿಗೆ ಚಿಕಿತ್ಸೆ ನೀಡಿದರು ಸಹ ಕೊನೆಯ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗಿ ಬದುಕಿಸುವುದು ಕಷ್ಟವಾಗಿದೆ. ಅಲ್ಲದೇ ನಮ್ಮ ಚಿಕಿತ್ಸೆ ವ್ಯವಸ್ಥೆ ಮತ್ತು ಸರ್ವೈಕಲ್ ಕ್ಯಾನ್ಸರ್ ಬಗ್ಗೆ ವೈದ್ಯಕೀಯ ಕ್ಷೇತ್ರದಲ್ಲಿ ನಡೆದ ಅವಿಷ್ಕಾರಗಳನ್ನು ತಿಳಿಸುವುದು. ಅಮೂಲ್ಯವಾದ ಜೀವಗಳನ್ನು ಉಳಿಸುವುದು ನಮ್ಮೆಲ್ಲರ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಈ ಕಾರ್ಯಾಗಾರ ಬಹಳ ಮಹತ್ವ ಪೂರ್ಣವನ್ನು ಪಡೆದುಕೊಂಡಿದೆ ಎಂದರು.

ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಗರ್ಭಧರಿಸುವ ಮಹಿಳೆಯರಿಗೆ ಹೆಚ್ಚಾಗಿ ಈ ಕ್ಯಾನ್ಸರ್ ಕಾಣಸಿಕೊಳ್ಳುತ್ತದೆ. ಇದನ್ನು ತಡೆಯಲು ಲಸಿಕೆಯನ್ನು ಹಾಕಲಾಗುತ್ತದೆ. ಈಗ ನಮ್ಮ ದೇಶದಲ್ಲಿ ಪ್ರೌಢಶಾಲೆ ಹಂತದಲ್ಲಿಯೇ ಎಚ್‌ಪಿವಿ ಲಸಿಕೆಯನ್ನು ಹಾಕಲಾಗುತ್ತದೆ. ಅನಿಮಿಯತವಾಗಿ ಬಿಳಿಸೆರಗು ಹೆಚ್ಚಾದಾಗ ಇಂಥ ಲಕ್ಷಣಗಳು ಕಂಡು ಬರುತ್ತದೆ. ಮುಂಜಾಗೃತೆ ಮತ್ತು ಮುನ್ನಚ್ಚರಿಕೆ ಕ್ರಮಗಳನ್ನು ಅನುಸರಿಸಿದರೆ ಸಂಪೂರ್ಣವಾಗಿ ಗರ್ಭಕಂಠ ಕ್ಯಾನ್ಸರ್ ಗುಣವಾಗುತ್ತದೆ. ಇದರ ಬಗ್ಗೆ ನಮ್ಮ ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳಿಗೆ ನುರಿತ ತಜ್ಞ ವೈದ್ಯರುಗಳ ಮುಖಾಂತರ ಕಾರ್ಯಾಗಾರಗಳನ್ನು ಆಯೋಜನೆ ಮಾಡಿ, ಇದರ ಬಗ್ಗೆ ಜಾಗೃ ತಿ ಮೂಡಿಸುವುದು ಮತ್ತು ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಿ. ವೈದ್ಯಕೀಯ ಕ್ಷೇತ್ರದಲ್ಲಿ ಆಗುವ ಬದಲಾವಣೆಗಳು ಮತ್ತು ಇತರೇ ಚಿಕಿತ್ಸೆ ಪದ್ಧತಿಗಳ ಬಗ್ಗೆ ತಿಳಿಸುವುದಾಗಿದೆ ಎಂದರು. ಕಾರ್ಯಾಗಾರದಲ್ಲಿ ಹಿರಿಯ ಪ್ರಸೂತಿ ತಜ್ಞ ಡಾ. ಸೋಮೇಗೌಡ, ನಾರಾಯಣ ಹೆಲ್ತ್ ಕೇರ್ನ ಡಾ. ಸುಭಾಷ್,ಡಾ. ವಿದ್ಯಾ, ಡಾ. ಪ್ರದೀಪ್ ಹಾಗೂ ಡಾ. ಲೇಪಾಕ್ಷಿ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಸಿಮ್ಸ್ ಪ್ರಾಚಾರ್ಯ ಡಾ. ಅಜಯ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಚಿನ್ನಬೋವಿ, ವೈದ್ಯಕೀಯ ಅಧೀಕ್ಷಕ ಡಾ. ಮಾರುತಿ, ಪ್ರಸೂತಿ ತಜ್ಞವೈದ್ಯರಾದ ಡಾ. ರಾಜೇಶ್ವರಿ, ಡಾ. ಭಾರತಿ, ಡಾ. ನವೀನ್ ಚಂದ್ರ, ಡಾ. ಸರಸ್ವತಿ, ಡಾ. ನಾರಾಯಣ, ಸ್ನಾತಕೊತ್ತರ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಮೊದಲಾದವರು ಹಾಜರಿದ್ದರು.




### ಪ್ರಸೂತಿ, ಸ್ತ್ರೀ ರೋಗ ವಿಭಾಗದ ಕಾರ್ಯಾಗಾರ

**ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್ ಡಾ. ಮಂಜುನಾಥ್ ಮಾತನಾಡಿ, ಸಿಮ್ಸ್ ನಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರ ಸಹಯೋಗದಲ್ಲಿ ಕಾರ್ಯಾಗಾರವನ್ನು ಆಯೋಜನೆ ಮಾಡುತ್ತಿದ್ದು, ತುರ್ತು ಚಿಕಿತ್ಸೆ ವಿಭಾಗ, ಕೀಲು ಮತ್ತು ಮೂಳೆ ವಿಭಾಗ, ಗಂಟಲು ಮತ್ತು ಕಿವಿ ವಿಭಾಗ ಮಕ್ಕಳ ವಿಭಾಗ ಸೇರಿದಂತೆ ಅನೇಕ ಕಾರ್ಯಾಗಾರವನ್ನು ಆಯೋಜನೆ ಮಾಡಿದೆ. ಈಗ ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗದ ಕಾರ್ಯಾಗಾರ ನಡೆಯುತ್ತಿದೆ. ಮುಂದುವರಿದ ವೈದ್ಯಕೀಯ ಶಿಕ್ಷಣಕ್ಕೆ ಬುನಾದಿಯನ್ನು ಹಾಕಲಾಗುತ್ತಿದೆ. ಇದರಿಂದ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ ವೃತ್ತಿ ಕೌಶಲ್ಯ ವೃದ್ದಿ ಮತ್ತು ಇಂಥ ರೋಗಗಳ ಬಗ್ಗೆ ಅರಿವು ಮೂಡಿಸಿ ಗುಣಾತ್ಮಕ ಚಿಕಿತ್ಸೆಯನ್ನು ನೀಡಲು ಈ ಕಾರ್ಯಾಗಾರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.**

### ಚಾ.ನಗರ ಅಸ್ಪತ್ರೆಯಲ್ಲಿ ಲಸಿಕೆ ಮತ್ತು ಚಿಕಿತ್ಸೆ

**ಚಾಮರಾಜನಗರ ವೈದ್ಯಕೀಯ ಅಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆಯನ್ನು ನೀಡುವ ನಿಟ್ಟನಲ್ಲಿ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಲಸಿಕೆ ಮತ್ತು ಚಿಕಿತ್ಸೆ ನೀಡಲಾಗುತ್ತದೆ. ಈ ರೋಗ ತಡೆಯಲು ನಮ್ಮ ಅಸ್ಪತ್ಸೆಯಲ್ಲಿ ತಜ್ಞ ವೈದ್ಯರ ತಂಡವಿದ್ದು, ಗುಣಮಟ್ಟದ ಚಿಕಿತ್ಸೆಯನ್ನು ನೀಡಿ, ಗುಣಪಡಿಸುತ್ತಾರೆ. ಇಂಥ ಸಮಸ್ಯೆಗಳು ಕಂಡು ಬಂದಂತಹ ಮಹಿಳೆಯರು ಜಿಲ್ಲಾ ವೈದ್ಯಕೀಯ ಕಾಲೇಜು ಅಸ್ಪತ್ರೆಗೆ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಳ್ಳಿ, ಮುನ್ನಚ್ಚರಿಕೆ ಹಾಗೂ ಜಾಗೃತಿ ವಹಿಸಿ ಗರ್ಭಕಂಠ ಕ್ಯಾನ್ಸರ್ನಿಂದ ದೂರವಿರಿ ಎಂದು ಮಂಜುನಾಥ್ ತಿಳಿಸಿದರು.**

ಮೊದಲ ಪುಟದಿಂದ

## ದಲಿತ ಸಿಎಂ ತಪ್ಪಿಸಿದ್ದೇ ಸಿದ್ದು

ಹೇಳುತ್ತಿದ್ದಾರೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ಯಾವ ಒಕ್ಕಲಿಗರನ್ನು ಸಿಎಂ ಮಾಡಲು ನೆರವಾದರು? ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಹೋದವರು ಗತಿ ಈಗ ಏನಾಗಿದೆ? ಇವೆನ್ನೆಲ್ಲ ಹೇಳೋಕೆ ಹೋದರೆ ಪುಟಗಟ್ಟಲೇ ಹೇಳಬಹುದು. ಗ್ರಂಥನೇ ಬರೆಯಬಹುದು ಎಂದು ಲೇವಡಿ ಮಾಡಿದರು. ಕಾಂಗ್ರೆಸ್ ಹೈಕಮಾಂಡ್ ಐಸಿಯುನಲ್ಲಿದೆಯೋ ಎಲ್ಲಿದೆಯೋ, ಅಥವಾ ಇದೆಯೋ, ಇಲ್ವೋ ಗೊತ್ತಿಲ್ಲ' ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ವ್ಯಂಗ್ಯ ಮಾಡಿದರು. ನಾನು ಕೇಂದ್ರದಲ್ಲಿ ಕೈಗಾರಿಕೆ ಸಚಿವನಾಗಿರುವ ಕಾರಣ ಗೃಹ ಸಚಿವ ಪರಮೇಶ್ವರ ಅವರು ವೈಯಕ್ತಿಕ ಕೆಲಸಕ್ಕೆ ಭೇಟಿ ಮಾಡಿದ್ದರು. ಅದನ್ನು ಬಿಟ್ಟು ಯಾವುದೇ ರಾಜಕೀಯ ಚರ್ಚೆ ಆಗಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

## ಸಿದ್ದು ಸಾಮಾಜಿಕ ನ್ಯಾಯಕ್ಕೆ ಬದ್ಧ

ಸಿಎಂ ಸಿದ್ದರಾಮಯ್ಯ ಮತ್ತು ಎಚ್.ಡಿ ಕುಮಾರಸ್ವಾಮಿ ನಡುವಿನ ಜಟಾಪಟಿಯ ಸಾಮಾಜಿಕ ನ್ಯಾಯದ ಚರ್ಚೆಯ ಬಗ್ಗೆ ಮಾತನಾಡಿದ ಪರಮೇಶ್ವರ್ ಅವರು, ಸಿಎಂ ನಿಲುವುಗಳನ್ನು ಸಮರ್ಥಿಸಿಕೊಂಡಿದ್ದಾರೆ. ಅಲ್ಲದೆ, ಅವರಿಬ್ಬರ ವಾಕ್ಸಮರದ ಬಗ್ಗೆ ನಾನು ಉತ್ತರ ಕೊಡಕ್ಕಾಗಲ್ಲ ಎಂದರು. 16 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಶಾಲಾ, ಕಾಲೇಜುಗಳಲ್ಲಿ ಮೊಬೈಲ್ ಬ್ಯಾನ್ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ಚಿಂತನೆ ನಡೆದಿದೆ. ಮಕ್ಕಳಿಗೆ ಮೊಬೈಲ್ ಕೊಟ್ಟರೆ ವಿದ್ಯಾಭ್ಯಾಸದ ಕಡೆ ಗಮನ ಕಡಿಮೆ ಆಗುತ್ತದೆ. ಬಹಳ ದೇಶಗಳಲ್ಲಿ ಮೊಬೈಲ್ ಬ್ಯಾನ್ ನಿಯಮ ಇದೆ. ಆಸ್ಟ್ರೇಲಿಯಾ, ಯುರೋ ಪ್‌ನಲ್ಲಿ ಜಾರಿಯಲ್ಲಿದೆ. ನಾವೂ ಜಾರಿ ಮಾಡಲು ಚಿಂತನೆ ಮಾಡಿದ್ದೇವೆ. ಈಗಾಗಲೇ ಸಿಎಂ ಇದರ ಬಗ್ಗೆ ಮಾತಾಡಿದ್ದಾರೆ. ಸಾಧಕ–ಬಾಧಕ ಅಧ್ಯಯನ ಮಾಡಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

## ಕೃಷ್ಣ ವಿರುದ್ಧ ದೂರು

ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಮಹಿಳೆ ಕೊಟ್ಟ ದೂರಿನ ಆಧಾರದ ಮೇಲೆ ಸ್ನೇಹಮಯಿ ಕೃಷ್ಣ ಅವರನ್ನು ಎ1 ಆರೋಪಿಯನ್ನಾಗಿ ಬಸವೇಶ್ವರ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ

## ವೈದ್ಯರ ಮುಷ್ಕರ

ನಿರ್ವಹಿಸುತ್ತೇವೆ. ಆನಂತರವೂ ಸರ್ಕಾರದ ನಿಲುವಿನಲ್ಲಿ ಬದಲಾವಣೆ ಕಾಣದೇ ಇದ್ದರೆ ಮಾ.16ರಿಂದ ಗೈರಾಗುವ ಮೂಲಕ ಮುಷ್ಕರ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾತನಾಡಿ, ಆರೋಗ್ಯ ಇಲಾಖೆ ಬೇಡಿಕೆ ನ್ಯಾಯಯುತವಾಗಿವೆ. ಇದನ್ನು ಈಡೇರಿಸುವುದು ಕಷ್ಟವಲ್ಲ. ಪ್ರಧಾನ ಕಾರ್ಯದರ್ಶಿಗಳು ಗಮನ ಹರಿಸಿ ಸರ್ಕಾರದ ಹಂತದಲ್ಲಿ ಸರಿಪಡಿಸಬೇಕು ಮುಷ್ಕರಕ್ಕೆ ಸಂಘದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದರು.

## 'ಕೈನಿಂದಷ್ಟೇ' ದಲಿತ ಸಿಎಂ

**ಹೈಕಮಾಂಡ್ ತೀರ್ಮಾನ ಮಾಡುತ್ತದೆ. ವಿಪಕ್ಷಗಳು ತಮ್ಮ ಹುಳುಕು ಮುಚ್ಚಿಕೊಳ್ಳಲು ದಲಿತ ಸಿಎಂ ಕೂಗು ತಂದಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.**

## ಶಾಸಕನ ಕಾರಿನಲ್ಲಿ ಪ್ರೀತಂಗೌಡ

ಕಾರಿನಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಜತೆಯಲ್ಲೇ ಹಾಸನ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಜಾವಗಲ್ ಮಂಜುನಾಥ್ ಕೂಡ ಜತೆಗಿರುವುದು **ವಿಶೇಷ.** ಶಾಸಕ ಹರೀಶ್ಗೌಡ ಒಕ್ಕಲಿಗ ಸಮುದಾಯದ ನಾಯಕ. ಎಲ್ಲಕ್ಕಿಂತ ಮುಖ್ಯವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕ. ಅವರೊಂದಿಗೆ ಪ್ರೀತಂಗೌಡ ಕಾಣಿಸಿಕೊಂಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಆಕಸ್ಮಿಕವೋ ಉದ್ದೇಶಿತವೋ: ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಪ್ರೀತಂಗೌಡ, ಬಿಜೆಪಿ–ಜೆಡಿಎಸ್ ಹೊಂದಾಣಿಕೆಯಿಂದಾಗಿ ಇಕ್ಕಟ್ಟಿಗೆ ಸಿಲುಕಿರುವ ನಾಯಕರ ಪೈಕಿ ಪ್ರಮುಖರು. ಜೆಡಿಎಸ್ ವಿರುದ್ಧ ಹೋರಾಟದ ಮೂಲಕ ರಾಜಕೀಯ ಅಸ್ತಿತ್ವ ಕಂಡುಕೊಂಡಿರುವ ಪ್ರೀತಂಗೌಡ, ಇದೀಗ ಜೆಡಿಎಸ್ ಜತೆಯಲ್ಲೇ ಹೊಂದಾಣಿಕೆಯ ರಾಜಕಾರಣ ಮಾಡಬೇಕಿದೆ. ಈ ಸಂದಿಗ್ಧತೆಯಿಂದ ಪಾರಾಗಲು ಕಾಂಗ್ರೆಸ್ ಸೇರುವ ನಿಟ್ಟಿನಲ್ಲೂ ಚಿಂತನೆ ನಡೆಸಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ್ದ ಬೇಲೂರು ಕ್ಷೇತ್ರದ ಮಾಜಿ ಶಾಸಕ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಪ್ರೀತಂಗೌಡ ಕಾಂಗ್ರೆಸ್ಗೆ ಒಂದು ಕಾಲು ಇಟ್ಟಿದ್ದಾರೆ ಎಂದು ಆರೋಪ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಒಂದೆಡೆ, ರಾಜ್ಯಮಟ್ಟದಲ್ಲಿ ಪದಾಧಿಕಾರಿಯಾಗಿದ್ದರೂ ಪಕ್ಷದ ಆಂತರಿಕ ವಲಯದಲ್ಲಿ ಪ್ರೀತಂಗೌಡ ಅವರಿಗೆ ನಿರೀಕ್ಷಿತ ಮಟ್ಟದಲ್ಲಿ ಮನ್ನಣೆ ಸಿಗುತ್ತಿಲ್ಲ. ಮತ್ತೊಂದೆಡೆ, ಕಾಂಗ್ರೆಸ್ ತನ್ನ ನೆಲೆಯನ್ನು ಹಾಸನದಲ್ಲಿ ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಹವಣಿಸುತ್ತಿದೆ.

ಮೊದಲ ಪುಟದಿಂದ

## ರೈತರಿಗೆ ಸೂರ್ಯನಿಂದ ಹಣದ ಹೊಳೆ

ವಿದ್ಯುತ್ ವಿತರಣ ಕಂಪನಿ ತಕರಾರು ಎತ್ತುವುದಿಲ್ಲ. ಹೀಗಾಗಿ ಈಗ ಎಲ್ಲರೂ ರಾತ್ರಿ ವೇಳೆ ಮನೆಯಲ್ಲೇ ದ್ವಿಚಕ್ರವಾಹನ ಬ್ಯಾಟರಿ ರಿಚಾರ್ಜ್ ಮಾಡಿಕೊಂಡು ಬೆಳಗ್ಗೆ ಬಳಸುತ್ತಾರೆ. ಮನೆಗೆ ಹಿಂತಿರುಗಿ ಬರುವವರೆಗೆ ಮತ್ತೆ ರಿಚಾರ್ಜ್ ಮಾಡುವ ಪ್ರಶ್ನೆ ಬರುವುದಿಲ್ಲ.

ಆದರೆ ಹಳ್ಳಿಗಳಲ್ಲಿ ರಿಚಾರ್ಜ್ ಸಮಸ್ಯೆ ಇದೆ. ಇದಕ್ಕೆ ಮನೆಯಲ್ಲೇ ರಿಚಾರ್ಜ್ ಸೆಟ್ ಇಟ್ಟುಕೊಳ್ಳುವಂತೆ ಉತ್ತೇಜನ ನೀಡಲು ತಜ್ಞರು ಸಲಹೆ ಮಾಡಿದ್ದಾರೆ. ಏಕೆಂದರೆ ಹಳ್ಳಿಗಳಲ್ಲಿ ವಿದ್ಯುತ್ ಗುಣಮಟ್ಟ ಸ್ಥಿರವಾಗಿರುವುದಿಲ್ಲ. ವೋಲ್ಟೇಜ್ ಸಮಸ್ಯೆ ತೀವ್ರವಾಗಿದೆ. ಅಲ್ಲದೆ ವಿದ್ಯುತ್ ಪೂರೈಕೆ ಸಮರ್ಪಕವಾಗಿರುವುದಿಲ್ಲ. ಅದರಿಂದ ಸಾರ್ವಜನಿಕ ರಿಚಾರ್ಜ್ ಕೇಂದ್ರ ನಡೆಸುವುದು ಕಷ್ಟ. ಇದಕ್ಕೆ ಪರಿಹಾರ ಎಂದರೆ ಮನೆಯಲ್ಲೇ ರಿಚಾರ್ಜ್ ಯಂತ್ರ ಅಳವಡಿಸಿಕೊಳ್ಳುವುದು ಸೂಕ್ತ.

ಸೋಲಾರ್ ರಿಚಾರ್ಜ್

ಹಳ್ಳಿಗಳಲ್ಲಿ ಈಗ ಸೋಲಾರ್ ವಿದ್ಯುತ್ ಬಳಸುವುದು ಅಧಿಕಗೊಳ್ಳುತ್ತಿರುವುದರಿಂದ ಸೋಲಾರ್ ರಿಚಾರ್ಜ್ ಉಪಕರಣ ಅಳವಡಿಸುವುದು ಸೂಕ್ತ. 3–4 ಕೆವಿ ಸಾಮರ್ಥ್ಯದ ಸೋಲಾರ್ ಫಲಕ ಅಳವಡಿಸಿದರೆ 4 ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳನ್ನು ಸುಲಭವಾಗಿ ರಿಚಾರ್ಜ್ ಮಾಡಬಹುದು. ಇದಕ್ಕೆ ಕೇಂದ್ರದ ಸಹಾಯಧನವೂ ಸಿಗುತ್ತದೆ. ಹಳ್ಳಿಗಳಲ್ಲಿ ಐಪಿ 67 ವಾಹನಗಳನ್ನು ಬಳಸುವುದು ಸೂಕ್ತ. ಇವಿ ವಾಹನ ಬಳಸಲು 10 ಸಾವಿರರೂ. ವರೆಗೆ ಸಹಾಯಧನ, ಸೋಲಾರ್ ರಿಚಾರ್ಜಿಂಗ್ ಕೇಂದ್ರ ಸ್ಥಾಪಿಸಲು 27 ಸಾವಿರ ರೂ. ವರೆಗೆ ನೆರವು ಸಿಗುತ್ತದೆ. 5ಎ ಸಾಕೆಟ್ ಬಳಸುವುದು ಅಗತ್ಯ. ಬ್ಯಾಟರಿ ಚಾಲಿತ ದ್ವಿಚಕ್ರವಾಹನ ಪ್ರತಿ ಕಿಮೀಗೆ ಬಳಸುವ ವಿದ್ಯುತ್ ವೆಚ್ಚ 15–20 ಪೈಸೆ ಮಾತ್ರ. ವಾಹನ ತೆರಿಗೆ ಇಲ್ಲ. ಒಂದು ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು 1.89 ಲಕ್ಷದಿಂದ 3 ಲಕ್ಷರೂ.ವರೆಗೆ ವೆಚ್ಚವಾಗುತ್ತದೆ. ಇದರಿಂದ ಒಂದು ಬ್ಯಾಟರಿ ಚಾಲಿತ ದ್ವಿಚಕ್ರವಾಹನ ಒಟ್ಟು 1.98 ಟನ್ ಇಂಗಾಲಾಮ್ಲ ವಾತಾವರಣ ಸೇರುವುದನ್ನು ತಪ್ಪಿಸುತ್ತದೆ. ಸೋಲಾರ್ ವಿದ್ಯುತ್ ಬಳಸಿದರೆ ಶೇ.85 ರಷ್ಟು ಇಂಗಾಲಾಮ್ಲ ಹೊರಬರುವುದನ್ನು ತಪ್ಪಿಸಬಹುದು. ಅಂದರೆ ವಾತಾವರಣದ ಶುದ್ಧೀಕರಣಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆ. ಇಲ್ಲದಿದ್ದಲ್ಲಿ ಮರಗಳಿಗೆ ಹೆಚ್ಚಿನ ಕೆಲಸ ನೀಡಬೇಕು. ಅವುಗಳು ಇಂಗಾಲಾಮ್ಲ ಪಡೆದುಕೊಂಡು ಆಮ್ಲಜನಕವನ್ನು ವಾತಾವರಣ ನೀಡಬೇಕು. ಸೋಲಾರ್ ವಿದ್ಯುತ್ ಈ ಪ್ರಕ್ರಿಯೆಗೆ ಮಂಗಳ ಹಾಡುತ್ತದೆ.

ಮಹಾರಾಷ್ಟ್ರದಲ್ಲಿ ಸತಾರಾ ಜಿಲ್ಲೆಯ ಮನಿಂಚಿವಾಡಿ ಗ್ರಾಮದ ಮಹಿಳೆಯರು ಸೋಲಾರ್ ವಿದ್ಯುತ್ ಮೂಲಕ ರಿಚಾರ್ಜ್ ಮಾಡಿದ ದ್ವಿಚಕ್ರವಾಹನಗಳನ್ನು ಬಳಸಿ ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ. ಇಡೀ ಗ್ರಾಮದಲ್ಲಿ 420 ನಿವಾಸಿಗಳಿದ್ದಾರೆ. ಇಡೀ ಗ್ರಾಮದ ಬೀದಿದೀಪ, ಕುಡಿಯುವ ನೀರು, ಹೈನುಗಾರಿಕೆ ಸೇರಿದಂತೆ ಎಲ್ಲದ್ದಕ್ಕೂ ಸೋಲಾರ್ ವಿದ್ಯುತ್ ಬಳಕೆಯಾಗುತ್ತಿದೆ. ಹಗಲು ವೇಳೆ ಸೋಲಾರ್ ಸಂಪೂರ್ಣ ಬಳಕೆಯಾಗುತ್ತಿದೆ. ಬ್ಯಾಟರಿ ಚಾಲಿತ ದ್ವಿಚಕ್ರವಾಹನ ರಿಚಾರ್ಜ್ಗೆ ಪಂಚಾಯ್ತಿಯವರು ಉಚಿತವಾಗಿ ರಿಚಾರ್ಜ್ ಕೇಂದ್ರ ಸ್ಥಾಪಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ರಾಜಾ ಖಾಸ್ ಎಂಬ ಗ್ರಾಮ ಕೂಡ ಸಂಪೂರ್ಣ ಸೋಲಾರ್ ನಿಯಂತ್ರಿತವಾಗಿದೆ. ಇವಿ ವಾಹನಗಳ ಸಂಖ್ಯೆ ದಿನೇ ದಿನೇ ಅಧಿಕಗೊಳ್ಳುತ್ತಿದೆ. ಜಗತ್ತಿನಲ್ಲೇ ಚೀನಾ ಮೊದಲ ಸ್ಥಾನದಲ್ಲಿದ್ದು 35 ಕೋಟಿ ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳಿವೆ. ನಮ್ಮದು ಎರಡನೇ ಸ್ಥಾನ. 13 ಲಕ್ಷ ವಾಹನ. ರಾಜ್ಯದಲ್ಲಿ 1.77 ಲಕ್ಷ ವಾಹನಗಳಿವೆ. ಬೆಂಗಳೂರಿನಲ್ಲೇ 90 ಸಾವಿರ ವಾಹನಗಳಿವೆ. ಚಂದೀಗಢ, ಗೋವಾ, ದೆಹಲಿಯಲ್ಲಿ ಹೆಚ್ಚಿನ ವಾಹನಗಳು ಕಂಡು ಬಂದಿವೆ. ಬಹುಮಹಡಿ ಕಟ್ಟಡದವರು ಈಗ ಇವಿ ಚಾರ್ಜಿಂಗ್ ಅಳವಡಿಸಿಕೊಳ್ಳಬಹುದು. ಸೋಲಾರ್ ಉತ್ಪಾದನೆಯಲ್ಲಿ ಕರ್ನಾಟಕ ಮುಂದಿದೆ. ಒಟ್ಟು 9.9 ಗಿಗಾವ್ಯಾಟ್ ಸೋಲಾರ್ ವಿದ್ಯುತ್ ಪಡೆಯುವ ಸಾಮರ್ಥ್ಯ ಇದೆ. 1 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಪಡೆಯಲು 5 ಎಕರೆ ಬೇಕು. ಮನೆ ಮೇಲೆ 100 ಚದರಡಿ ಇದ್ದರೆ ಸಾಕು 1 ಕೆವಿ ವಿದ್ಯುತ್ ಪಡೆಯಬಹುದು. ಒಂದು ಮನೆಗೆ 3 ಕೆವಿ ಸಾಕು. ಸೋಲಾರ್ ಅಳವಡಿಕೆಗೆ ಕೇಂದ್ರ ಎಲ್ಲ ರೀತಿಯ ನೆರವು ನೀಡುತ್ತಿದೆ. ಏಪ್ರಿಲ್ ನಂತರ ಸೋಲಾರ್ ಫಲಕ ಮತ್ತು ಸಲಕರಣೆಗಳನ್ನು ತಯಾರಿಸುವವರಿಗೆ ಜಿಎಸ್‌ಟಿಯಲ್ಲಿ ಕಡಿಮೆ ದರ ಲಭಿಸಲಿದೆ. ಈಗ ಶೇ.15 ಇರುವ ಜಿಎಸ್‌ಟಿ ಶೇ.5 ಕ್ಕೆ ಇಳಿಯಲಿದೆ. ಈಗ ಪ್ರತಿ ಯೂನಿಟ್ ಸೋಲಾರ್ ವಿದ್ಯುತ್ ದರ 2.51ರೂ. ಇದರಲ್ಲಿ ಮತ್ತೆ 9–10 ಪೈಸೆ ಇಳಿಮುಖ ಆಗಲಿದೆ. ಹೀಗಾಗಿ ಸೋಲಾರ್ ವಿದ್ಯುತ್ ಉತ್ಪಾದನೆ ವೆಚ್ಚ ಇಳಿಮುಖಗೊಳ್ಳಲಿದೆ. ಹೀಗಾಗಿ ರಾಷ್ಟ್ರೀಯ ಹೆದ್ದಾರಿಗಳ ಸಮೀಪ ಇರುವ ಗ್ರಾಮಸ್ಥರು ಬಂಜರು ಭೂಮಿಯಲ್ಲಿ ಸೋಲಾರ್ ಫಲಕ ಅಳವಡಿಸಿ ರಿಚಾರ್ಜಿಂಗ್ ಕೇಂದ್ರ ಸ್ಥಾಪಿಸಬಹುದು. ಅದರಿಂದ ಆದಾಯ ಪಡೆಯಬಹುದು. ಸೋಲಾರ್ ಫಲಕ 25 ವರ್ಷ ಬಾಳ್ವಿಕೆ ಬರಲಿದೆ. ಹಿಂದೆ ಹೊಟೇಲ್, ಪೆಟ್ರೋಲ್ ಬಂಕ್ ಬಳಿ ರಿಚಾರ್ಜಿಂಗ್ ಕೇಂದ್ರ ಸ್ಥಾಪಿಸುತ್ತಿದ್ದರು. ಈಗ ಪೆಟ್ರೋಲ್ ಬಂಕ್ ಬಳಿ ಸೋಲಾರ್ ಇರುವುದು ಒಳ್ಳೆಯದಲ್ಲ ಎಂದು ತಜ್ಞರು ಹೇಳುತ್ತಿರುವುದರಿಂದ ಪ್ರತ್ಯೇಕ ಸ್ಥಳದಲ್ಲಿ ಚಾರ್ಜಿಂಗ್ ಸ್ಥಾಪಿಸುವುದು ಅನಿವಾರ್ಯವಾಗಿದೆ. ಗ್ರಾಮಸ್ಥರು ಇದನ್ನು ಪಾರ್ಟ್ ಟೈಂ ರೀತಿ ಕೈಗೊಂಡರೆ ಅನುಕೂಲವಾಗುತ್ತದೆ. ಸೋಲಾರ್ ಆಗಿರುವುದರಿಂದ ಹೆಚ್ಚಿನ ಸಮಸ್ಯೆ ಇರುವುದಿಲ್ಲ. ಬ್ಯಾಟರಿ ಅಳವಡಿಸಿಕೊಂಡಲ್ಲಿ ರಾತ್ರಿವೇಳೆಯೂ ರಿಚಾರ್ಜ್ ಮಾಡಬಹುದು. ಈಗ ರೈತರು ಕೃಷಿ ನಂಬಿಕೊಂಡು ಜೀವನ ನಡೆಸುವುದು ಕಷ್ಟವಾಗಿದೆ. ಹೀಗಾಗಿ ಬಂಜರು ಭೂಮಿಯಲ್ಲಿ ಸೋಲಾರ್ ಫಲಕ ಅಳವಡಿಸಿ ಅದನ್ನು ಮಾರುವುದರಿಂದ ರೈತನಿಗೆ ಸ್ವಲ್ಪವಾದರೂ ಆದಾಯ ಬರಲು ಸಾಧ್ಯ. ನಮ್ಮ ವಿದ್ಯುತ್ ವಿತರಣ ಕಂಪನಿಗಳು ರೈತರಿಂದ ವಿದ್ಯುತ್ ಪಡೆದರೆ ಸಕಾಲದಲ್ಲಿ ಹಣ ಪಾವತಿಸುವುದಿಲ್ಲ. ಅದರಿಂದ ಸಾಲಸೋಲ ಮಾಡಿದ ರೈತರಿಗೆ ಬದುಕುವುದು ಕಷ್ಟವಾಗುತ್ತದೆ. ಸೋಲಾರ್ ವಿದ್ಯುತ್ ದ್ವಿಚಕ್ರವಾಹನಗಳ ರಾಚಾರ್ಜ್ ಕೇಂದ್ರ ನೀಡಿದರೆ ತಕ್ಷಣವೇ ಹಣ ಬರುವುದರಿಂದ ಸಮಸ್ಯೆ ಇರುವುದಿಲ್ಲ. ಅದರಲ್ಲೂ ದ್ವಿಚಕ್ರ ವಾಹನಗಳ ರಿಚಾರ್ಜ್ ಕಷ್ಟದ ಕೆಲಸವೇನಲ್ಲ. ಸೋಲಾರ್ ವಿದ್ಯುತ್ ಉಚಿತವಾಗಿ ಸಿಗುವುದರಿಂದ ರೈತರಿಗೆ ಮನೆ ಮುಂದೆ ಹಣ ಸಂಪಾದನೆ ಮಾರ್ಗ ಸಿಕ್ಕಂತೆ ಆಗುವುದು. ಈಗ ಬ್ಯಾಟರಿ ಚಾಲಿತ ದ್ವಿಚಕ್ರವಾಹನಗಳ ಸಂಖ್ಯೆ ಅಧಿಕಗೊಳ್ಳುತ್ತಿರುವುದರಿಂದ ಅವುಗಳ ರಿಚಾರ್ಜ್ಗೂ ಬೇಡಿಕೆ ಅಧಿಕಗೊಳ್ಳುತ್ತದೆ. ಅದಕ್ಕೆ ಈಗಿನಿಂದಲೇ ಸಕಲ ಸಿದ್ಧತೆ ಮಾಡಿಕೊಳ್ಳುವುದು ಸೂಕ್ತ. ರಾಷ್ಟ್ರೀಯ ಹೆದ್ದಾರಿ ನಿಗಮದವರು ತಮ್ಮ ಬೇಲಿಗಳಿಗೆ ಸೋಲಾರ್ ಫಲಕ ಅಳವಡಿಸಿದರೆ ಬೇಕಾದಷ್ಟು ಉಚಿತ ವಿದ್ಯುತ್ ಪಡೆಯಬಹುದು. ಇದರಿಂದ ಯುವಕರಿಗೆ ಉದ್ಯೋಗವನ್ನೂ ಕೊಡಬಹುದು. ಈಗ ಬೆಂಗಳೂರು– ಮೈಸೂರು ಹೆದ್ದಾರಿ ಇಕ್ಕೆಲಗಳಲ್ಲಿ 100 ಕಿಮೀ ಸೌರಫಲಕ ಅಳವಡಿಸಲು ಅವಕಾಶವಿದೆ. ಹಳ್ಳಿಯ ಜನರ

# ಬೃಹತ್ ಪ್ರತಿಭಟನೆ: ಕೃಷ್ಣಮೂರ್ತಿ



ಚಾಮರಾಜನಗರ : ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಪದ್ಧತಿಯ ಅನ್ಯಾಯ ಖಂಡಿಸಿ ಬಲಗೈ ಸಮುದಾಯದ ವತಿಯಿಂದ ಫೆ.24ರಂದು ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಗೌರವಾಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ ಹೇಳಿದರು.

ನಗರದಲ್ಲಿ ನಡೆದ ತುರ್ತುಸಭೆಯಲ್ಲಿ ಅವರು ಮಾತನಾಡಿ, ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಬಿಂದು ಪದ್ಧತಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಶೈಕ್ಷಣಿಕ ಪ್ರವೇಶಗಳಲ್ಲಿ, ಉದ್ಯೋಗಗಳ ಒಂದು ಅಧಿಸೂಚನೆಯಲ್ಲಿ ನೋಡುತ್ತಿದ್ದೇವೆ. ಇದನ್ನು ರಾಜ್ಯ ಸರ್ಕಾರ ಮನಗಂಡು ತಕ್ಷಣವೇ ಒಳಮೀಸಲಾತಿಯ ರೋಸ್ಟರ್ ಪದ್ಧತಿಯನ್ನು ಹಿಂಪಡೆಯುವಂತೆ ಒತ್ತಾಯಿಸಿ ನಾಳೆ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ಬೆ.10 ಗಂಟೆಗೆ ದೊಡ್ಡಂಗಡಿ ಬೀದಿ ಮಾರ್ಗವಾಗಿ ಹೊರಟು ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತದ ಮಾರ್ಗವಾಗಿ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು.ಎಂದರು. ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್, ಕಾರ್ಯಾಧ್ಯಕ್ಷ ಸಿ.ಕೆ. ಮಂಜುನಾಥ್, ವಾಸು ಹೊಂಡರಬಾಳು, ಬಾಬು ರಾಮಸಮುದ್ರ, ರಂಗಸ್ವಾಮಿ ಗಾಳೀಪುರ, ಕುಮಾರ್ ಭಾಗವಹಿಸಿದ್ದರು.

**ಒಳಮೀಸಲಾತಿ ಅನ್ಯಾಯಕ್ಕೆ ಖಂಡನೆ**

# ಮಹಿಳಾ ಹಕ್ಕು: ವಿಶೇಷ ಉಪನ್ಯಾಸ



ಗುಂಡ್ಲುಪೇಟೆ:- ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಲ್ಲಿ ಮಹಿಳಾ ಕುಂದು ಕೊರತೆ ನಿವಾರಣೆ ಹಾಗೂ ದೌರ್ಜನ್ಯ ತಡೆ ಸಮಿತಿ ಮತ್ತು ಅಂತರಿಕ ಗುಣಮಟ್ಟ ಭರವಸೆಯ ಕೋಶ ಹಾಗೂ ವರದಕ್ಷಿಣೆ ಕಾನೂನು ಮತ್ತು ಮಹಿಳಾ ಹಕ್ಕುಗಳ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು .

ಅಪರಾಧ ವಿಭಾಗ ಚಾಮರಾಜನಗರ ಜಿಲ್ಲಾ ಪೋಲಿಸ್ ಇಲಾಖೆ ಹಾಗೂ ಸಂಪನ್ಮೂಲ ವ್ಯಕ್ತಿ ಸಿಂಗಂ ನಾಗರಾಜ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ವರದಕ್ಷಿಣೆ ಕಾನೂನು ಮತ್ತು ಹಕ್ಕುಗಳ ಬಗೆಗೆ ತಿಳಿಸಿಕೊಡುವುದರ ಜೊತೆ ಜೊತೆಗೆ ಇಂದಿನ ಯುವ ಜನತೆ ಮೊಬೈಲ್ ಬಳಕೆಯಿಂದ ತಮ್ಮ ಅರಿವಿಗೆ ಬಾರದ ರೀತಿ ಹೇಗೆ ಅಪರಾಧಗಳಲ್ಲಿ ಸಿಲುಕಿ ಕೊಳ್ಳುತ್ತಿದ್ದಾರೆ ಎಂಬುದನ್ನು ಉದಾಹರಣೆಗಳ ಸಹಿತ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ಪ್ರಾಂಶುಪಾಲರು ಡಾ.ಮದನಕುಮಾರ ಎ ಆರ್ ರವರು ಮತನಾಡುತ್ತಾ ಪ್ರಸ್ತುತ ದಿನಗಳಲ್ಲಿ ವರದಕ್ಷಿಣೆಯ ಬದಲು ವಧುದಕ್ಷಿಣೆ ಹೆಚ್ಚು ಚಾಲ್ತಿಯಲ್ಲಿದ್ದು ಗಂಡು ಮಕ್ಕಳು ಭವಿಷ್ಯದ ಹಿತದೃಷ್ಟಿಯಿಂದ ಒಳ್ಳೆಯ ಉದ್ಯೋಗ ಮತ್ತು ವ್ಯಕ್ತಿತ್ವವನ್ನು ಗಳಿಸುವುದು ಬಹಳ ಮುಖ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಜೊತೆಗೆ ಕಾನೂನುಗಳನ್ನು ಹಿತವನ್ನು ಕಾಪಾಡಲು ಬಳಸಬೇಕೇ ವಿನಃ ದುರುಪಯೋಗವಾಗದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಸಮಿತಿ ಸಂಚಾಲಕಿ ಡಾ. ಜ್ಯೋತಿ ಕೆ ಎಸ್, ಐ. ಕ್ಯು.ಎ.ಸಿ ಸಂಚಾಲಕ. ವಿಜಯ್ ಕುಮಾರ್, ಗಣಿತ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಪವಿತ್ರ ಜಿ ಬಿ ಇತಿಹಾಸ ವಿಭಾಗದ ಕವಿತಾ, ಗ್ರಂಥಪಾಲಕ ಶ್ರೀನಿವಾಸ ನಾಯಕ್, ಇಂಗ್ಲಿಷ್ ವಿಭಾಗ ಮುಖ್ಯಸ್ಥ ಮಂಜುನಾಥ್, ದೈಹಿಕ ಶಿಕ್ಷಣ ನಿರ್ದೇಶಕ ಪುಟ್ಟರಾಜು ಹಾಗೂ ಕಾಲೇಜಿನ ಅಧ್ಯಾಪಕ ವರ್ಗದವರು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಜರಿದ್ದರು

# ಫೆ.26.27ರಂದು ದೇಗುಲ ಲೋಕಾರ್ಪಣೆ

## ಕಡಬೂರು ಗ್ರಾಮದಲ್ಲಿ ಶಿವಲಿಂಗ ಮತ್ತು ಗಣೇಶ ದೇವಸ್ಥಾನ ನೂತನ ನಿರ್ಮಾಣ

ಗುಂಡ್ಲುಪೇಟೆ: ತಾಲ್ಲೂಕಿನ ಕಡಬೂರು ಗ್ರಾಮದಲ್ಲಿ ಫೆ.26 ಮತ್ತು 27 ರಂದು ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶಿವ ಮತ್ತು ಗಣೇಶ ದೇವಾಲಯದ ಉದ್ಘಾಟನೆ ಹಾಗೂ ವಿಮಾನ ಗೋಪುರ ಮತ್ತು ಕಳಶಾರೋಹಣ ಮಹೋತ್ಸವ ನಡೆಯಲಿದ್ದು ಸಮಾರಂಭವನ್ನು ವಿಜೃಂಭಣೆಯಿಂದ ಹಮ್ಮಿಕೊಂಡಿದ್ದು ಶರಣಬಂದುಗಳು ಸಹಸ್ರ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ತಾಲ್ಲೂಕಿನ ಎಲ್ಲಾ ಗ್ರಾಮದ ಜನತೆಗೆ ಕಡಬೂರು ಗ್ರಾಮಸ್ಥರು ಪತ್ರಿಕಾ ಪ್ರಕಟನೆಯ ಮೂಲಕ ಆಹ್ವಾನಿಸಿದ್ದಾರೆ.

ದಿನಾಂಕ26-02-2026ನೇ ಗುರುವಾರ ಸಂಜೆ 4-00 ಗಂಟೆಯ ಗೋದೂಳಿ ಲಗ್ನದಲ್ಲಿ ಕಳಸ ಪೂಜೆಯ ಮೂಲಕ ಹಾಲರವೆ. ವೀರಗಾಸೆ, ಛತ್ರಿ-ಛಾಮರ, ನಂದಿ ಧ್ವಜ, ಮಂಗಳ ವಾದ್ಯಗಳ ಸಮೇತ ಗಂಗಾ ತಡಿಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ದೇವಸ್ಥಾನದ ಸ್ಥಳಕ್ಕೆ ತಲುಪುವುದು.

ನಂತರ ಪ್ರವೇಶ ಬಲಿ, ಗೋವು ಪೂಜೆಯೊಡನೆ ಆಲಯ ಪ್ರವೇಶ, ಮಹಾಸಂಕಲ್ಪ, ಗಣಪತಿ ಪೂಜೆ, ದೀಪಾರಾಧನೆ, ಸ್ವಸ್ತಿ ಪುಣ್ಯಃ ವಾಚನ, ನಾಂದಿ ಸಮಾರಾಧನೆ, ಪಂಚಗವ್ಯಸಾಧನಾ ಪ್ರೋಕ್ಷಣೆ, ನವಗ್ರಹ ಪೂಜೆ, ಪಂಚಕಳಶಪೂಜೆ. ಅಷ್ಟದಿಕ್ಪಾಲಕರು, ಸಪ್ತಕಳಶಪೂಜೆ, ಸಪ್ತಮಾತೃಕಾ ಪೂಜೆ, ಉಮಾಮಹೇಶ್ವರಿ, ಅಷ್ಟಲಕ್ಷ್ಮಿ, ಪ್ರಧಾನದೇವತಾ ಪೂಜೆ, ರಕ್ಷಾ ಬಂಧನ, ಅಂಕುರಾರ್ಪಣಾ, ಏಕದಶರುದ್ರ ಕಳಶ ಆರಾಧನೆ, ಅಗ್ನಿ ಪ್ರಮುಖ ಪ್ರಯೋಗ ಪೂರ್ವಕ ಗಣಪತಿ ಹೋಮ, ನವಗ್ರಹ ಹೋಮ, ವಾಸ್ತು ಹೋಮ, ಲಘು ಪೂರ್ಣಾಹುತಿಗಳೊಡನೆ ಹೋಮ. ದಿನಾಂಕ 27-02-2026ನೇ ಶುಕ್ರವಾರ ಪ್ರಾಂತಃಕಾಲ 3-30 ರಿಂದ 4-20 ಗಂಟೆಗೆ ಸಲ್ಲುವ ಧನುಸ್ಸು ಲಗ್ನದ ಬ್ರಾಹ್ಮ ಮುಹೂರ್ತದಲ್ಲಿ ಯಂತ್ರಾನ್ಯಾಸ, ರತ್ನನ್ಯಾಸ, ಮೂಲಕ ಶ್ರೀ ಶಿವಲಿಂಗ ಮತ್ತು ಗಣಪತಿ ದೇವರುಗಳ ಶಿಲಾಯಂತ್ರದ ದೇವತಾ ಪ್ರಾಣ ಪ್ರತಿಷ್ಠಾಪನೆ, ರುದ್ರಾಭಿಷೇಕ, ಮೃತ್ಯುಂಜಯ ಹೋಮ, ದುರ್ಗಾಹೋಮ, ನೇತ್ರೋಸ್ಮಿಲನ, ವಿಮಾನ ಗೋಪುರದ ಕಳಶರೋಹಣ ಮಹಾಬಲಿ ಮಹಾಪೂರ್ಣಾಹುತಿ, ಅಷ್ಟೋತ್ತರ, ಮಹಾಮಂಗಳಾರತಿ ನೆರವೇರಿಸಿದ್ದು ಈ ಮೇಲ್ಕಂಡ ಎಲ್ಲಾ ಪೂಜಾಕ್ರಮಗಳನ್ನು ಕಬ್ಬಹಳ್ಳಿ ಶ್ರೀ ಜಂಗಮ ಮಠದ ಪರಮಪೂಜ್ಯರಾದ ಶ್ರೀ ಷ॥ ಬ್ರ॥ ಶ್ರೀ ಗುರುಸಿದ್ದಸ್ವಾಮಿಗಳವರಿಂದ ನೇರವೇರಿಸಲಿದ್ದಾರೆ.



### ವಿಶೇಷ ಆಹ್ವಾನಿತರು


**ಕಾರ್ಯಕ್ರಮಕ್ಕೆ ಹೆಚ್.ಡಿ. ಕುಮಾರಸ್ವಾಮಿರವರು ಮಾಜಿ ಮುಖ್ಯಮಂತ್ರಿಗಳು ಕೇಂದ್ರ ಸಚಿವರು ಉಕ್ಕು ಮತ್ತು ಬೃಹತ್ ಕೈಗಾರಿಕಾ , ಭಾರತ ಸರ್ಕಾರ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್. ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷರು ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ,.ಎಂ.ಆರ್. ಮಂಜುನಾಥ್ ಶಾಸಕರು,ಹನೂರು ವಿಧಾನಸಭಾ ಕ್ಷೇತ್ರ ಇವರುಗಳು ಭಾಗಿಯಾಗಲಿದ್ದಾರೆ.**

### ಧಾರ್ಮಿಕ ಸಭೆಯಲ್ಲಿ ಭಾಗಿ

**ದಿವ್ಯ ಸಾನಿಧ್ಯ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ, ಸಿದ್ದಲಿಂಗಮಹಾಸ್ವಾಮಿಗಳು ಶ್ರೀ ಸಿದ್ದಗಂಗಾ ಮಠಾಧ್ಯಕ್ಷರು, ಸಿದ್ದಗಂಗಾ ಕ್ಷೇತ್ರ, ತುಮಕೂರು, ಶ್ರೀ ಮಹಾಂತಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠಾಧ್ಯಕ್ಷರು, ದೇವನೂರು ಅಧ್ಯಕ್ಷತೆ ಶ್ರೀ ನಿ. ಪ್ರ. ಸ್ವ. ಶ್ರೀ ಶಿವಲಿಂಗೇಂದ್ರಸ್ವಾಮಿಗಳವರು, ಅಡವಿ ಮಠಾಧ್ಯಕ್ಷರು, ಪಡುಗೂರು. ಶ್ರೀ ಸಿದ್ದಮಲ್ಲಸ್ವಾಮಿಗಳವರು. ವೀರಸಿಂಹಾಸನ ಶಿಲಾ ಮಠಾಧ್ಯಕ್ಷರು, ಸೋಮಹಳ್ಳಿ. ತೋಂಟದಾರ್ಯಸ್ವಾಮಿಗಳು ಶ್ರೀವಿರಕ್ತ ಮಠ, ಮಾದಪಟ್ಟಣ,ಶ್ರೀ ಚನ್ನಬಸವಸ್ವಾಮಿಗಳು,ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷರು, ಶ್ರೀ ಸರ್ಪಭೂಷಣಸ್ವಾಮಿಗಳು ವಿರಕ್ತ ಮಠಾಧ್ಯಕ್ಷರು, ಹರವೆ, ಮತ್ತೊತರ ಸ್ಥಳೀಯ ಮಠಾಧೀಶರು ಭಾಗಿಯಾಗಲಿದ್ದಾರೆ.**

# ನಾಳೆ ರಾಘವೇಂದ್ರಸ್ವಾಮಿ ಮಠದಲ್ಲಿ ಗುರು ಭಕ್ತಿ ಉತ್ಸವ

ಚಾಮರಾಜನಗರ, ನಗರದ ಶಂಕರಪುರ ಬಡಾವಣೆಯ ವಾದಿರಾಜನಗರದಲ್ಲಿರುವ ಶ್ರೀ ಗುರುರಾಘವೇಂದ್ರಸ್ವಾಮಿ ಮಠದಲ್ಲಿ ಫೆ .24 ರಂದು ಮಂಗಳವಾರ ಗುರು ಭಕ್ತಿ ಉತ್ಸವ ನಡೆಯಲಿದೆ.



ಮಂತ್ರಾಲಯ ಪ್ರಭು ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 431 ನೇ ಜನ್ಮದಿನದ ಪ್ರಯುಕ್ತ ಶ್ರೀ ಮಠದಲ್ಲಿ ಗುರು ಭಕ್ತಿ ಉತ್ಸವ ನಡೆಯಲಿದ್ದು ಬೆಳಿಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು, ಶ್ರೀರಾಘವೇಂದ್ರಸ್ತೋತ್ರ, ಪಂಚಾಮೃತ ಅಭಿಷೇಕ, ಸಾಮೂಹಿಕ ಕನಕಾಭಿಷೇಕ ಸೇರಿದಂತೆ ರಾತ್ರಿ 8 ಕ್ಕೆ ಸಾಮೂಹಿಕ ರಥೋತ್ಸವ ಹಾಗೂ ಪ್ರಸಾದ ವಿನಿಯೋಗ ನಡೆಯಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುರುರಾಯರ ಕೃಪೆಗೆ ಪಾತ್ರರಾಗಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಅರ್ಚಕರಾದ ಪವನ್ ಮತ್ತು ಶ್ರೀಧರ್ ಮನವಿ ಮಾಡಿದ್ದಾರೆ

# ಕ್ರೀಡಾ ಸಾಧನೆಗೆ ಪ್ರೋತ್ಸಾಹ ಅಗತ್ಯ



ಮೈಸೂರು: ಕೇಂದ್ರ ಸರ್ಕಾರದ ಈ ರೀತಿಯ ಯೋಜನೆಗಳಿಂದ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಬಹಳಷ್ಟು ಅನುಕೂಲಗಳಾಗಿದ್ದು, ಕ್ರೀಡಾ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆಗಳನ್ನು ಮಾಡಲು ಅನುಕೂಲವಾಗಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ಹೇಳಿದರು.

ದೊಡ್ಡ ಮಾರಗೌಡನಹಳ್ಳಿ ನವೋದಯ ಜವಹರ್ ವಿದ್ಯಾಲಯದಲ್ಲಿ ನಡೆದ ಕೇಂದ್ರ ಸರ್ಕಾರದ ಫೆಡರೇಷನ್ ಇಂಟರ್ ನ್ಯಾಷನಲ್ ಅಸೋಸಿಯೇಷನ್ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಫುಟ್ಬಾಲ್ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ದೇಶದಾದ್ಯಂತ ಜವಾಹರ್ ನವೋದಯ ವಿದ್ಯಾಲಯಗಳು, ನೀಡುತ್ತಿರುವ ಗುಣಮಟ್ಟದ ಶಿಕ್ಷಣದ ಜೊತೆಗೆ ಕ್ರೀಡೆಗೆ ನೀಡುತ್ತಿರುವ ಪ್ರೋತ್ಸಾಹವನ್ನು ಕೊಂಡಾಡಿದರು. ಶಾಸಕರ ಅನುದಾನದಲ್ಲಿ ಶಾಲೆಗೆ ಅಗತ್ಯವಿರುವ ಎರಡು ತರಗತಿ ಕೊಠಡಿಗಳನ್ನು ನಿರ್ಮಿಸಿ ಕೊಡುವುದಾಗಿ ತಿಳಿಸಿ, ಕ್ರೀಡಾಂಗಣಕ್ಕೆ ಅಗತ್ಯವಿರುವ ಎರಡು ಹೈಮಾಸ್ ಲೈಟ್ ಗಳನ್ನು ಅಳವಡಿಸಿ ಕೊಡುವುದಾಗಿ ಭರವಸೆ ನೀಡಿದರು. ಫುಟ್ಬಾಲ್ ನಂತಹ ಕ್ರೀಡೆಯಿಂದ ವಿದ್ಯಾರ್ಥಿಗಳ ದೈಹಿಕ ಸದೃಢತೆ ಜೊತೆಗೆ ಮಾನಸಿಕ ಆರೋಗ್ಯ ವೃದ್ಧಿಗೊಳಿಸುತ್ತದೆ ಎಂದರು.

ಇದೇ ವೇಳೆ ಜಿಲ್ಲೆಯಾದ್ಯಂತ 333 ಶಾಲೆಗಳಿಗೆ ಫುಟ್ಬಾಲ್ ಗಳನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಉಪ ನಿರ್ದೇಶಕ ಉದಯ್ ಕುಮಾರ್, ಪ್ರಾಂಶುಪಾಲ ವಿ.ಶ್ರೀನಿವಾಸನ್, ಉಪ ಪ್ರಾಂಶುಪಾಲ ಶಾಜು ಜೋಸೆಫ್, ಜಿಲ್ಲಾ ದೈಹಿಕ ಶಿಕ್ಷಣ ಶಿಕ್ಷಣಾಧಿಕಾರಿ ಯೋಗಾನಂದ, ಪೋಷಕ ಶಿಕ್ಷಕ ಸಮಿತಿಯ ಸದಸ್ಯರಾದ ಡಾ. ಯೋಗೀಂದ್ರ., ಅಂಜನಿಕುಮಾರ್ ಉಪಸ್ಥಿತರಿದ್ದರು.

# ಶಾಲೆಗಳಿಗೆ ಕಂಪ್ಯೂಟರ್ ವಿತರಣೆ



ಮೈಸೂರು: ನಗರದ ಕನಕಗಿರಿ, ವಿನಾಯ ಕನಗರ ಹಾಗೂ ಆದರ್ಶ ಪ್ರೌಢಶಾಲೆಗಳಿಗೆ 2024-25ನೇ ಸಾಲಿನ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜ ನೆಯಡಿಯಲ್ಲಿ ಕಂಪ್ಯೂಟರ್‌ಗಳನ್ನು ಸಂಸದ ಯಧುವೀರ ಒಡೆಯರ್ ವಿತರಿಸಿದರು.

ನಂತರ ಮಾತನಾಡಿದ ಸಂಸದ ಯದು ವೀರ್ ಕೃಷ್ಣದತ್ತ ಚಾಮ ರಾಜ ಒಡೆಯರ್ ಆಧುನಿಕಯುಗದಲ್ಲಿ ತಂತ್ರಜ್ಞಾನದ ಪ್ರಯೋಜನವನ್ನು ಸರ್ಕಾರಿ ಶಾಲಾ ಮಕ್ಕಳು ಬಳಸಿಕೊಳ್ಳಬೇಕು. ಕಂಪ್ಯೂಟರ್‌ಗಳಿಂದ ನಿಮ್ಮ ವ್ಯಾಸಂಗಕ್ಕೆ ಅನುಕೂಲವಾ ಗುವ ರೀತಿಯಲ್ಲಿ ಬಳಸಿಕೊಳ್ಳಬೇಕು. ಇವತ್ತಿನ ಎಐ ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಬ್ಬ ವಿಧ್ಯಾರ್ಥಿಯೂ ಸೃಜನಶೀಲರಾಗಬೇಕು. ಈ ದಿಸೆಯಲ್ಲಿ ಶಿಕ್ಷಕರು ಸಹ ಮಕ್ಕ ಳಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು. ಮುಂದೆ ಇದರಿಂದ ನೀವು ಉತ್ತಮ ಭವಿಷ್ಯ ರೂಪಿಸಿ ಕೊಂಡರೆ ಕಾರ್ಯಕ್ರಮ ಸಾರ್ಥ ಕವಾಗುತ್ತದೆ ಎಂದರು. ಶಾಸಕ ಶ್ರೀವತ್ಸ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಉದಯ್ ಕುಮಾರ್, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ ಉಪಸ್ಥಿತರಿದ್ದರು.

# ಮಕ್ಕಳಲ್ಲಿ ನಾಯಕತ್ವ: ಮಾದರಿ ಯಾರು?: ಎ.ನರಸಿಂಹ ಮೂರ್ತಿ ಪ್ರಶ್ನೆ



ರಾಮನಗರ: ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸಲು ಮಾದರಿ ಯಾರಾಗಬೇಕು? ಎಂಬುದು ಇಂದಿನ ಮೌಲಿಕವಾದ ಪ್ರಶ್ನೆ. ಹಿರಿಯರು ಹಾಕಿಕೊಟ್ಟ ಎಲ್ಲ ಮಾರ್ಗಗಳನ್ನೂ ಧೂಳೀಪಟ ಮಾಡಿಕೊಂಡು ಹೋಗುತ್ತಿರುವ ನಾವೇ ಆಯ್ಕೆ ಮಾಡಿರುವ ನಮ್ಮನ್ನಾಳುತ್ತಿರುವ ಜನ ನಾಯಕರನ್ನು ತೋರಿಸೋಣವೇ? ಎಂದು ಜನಸಹಯೋಗದ ಕಾರ್ಯದರ್ಶಿ ಎ. ನರಸಿಂಹಮೂರ್ತಿ ಪ್ರಶ್ನಿಸಿದರು.

ಜನಸಹಯೋಗ ಮತ್ತು ಕೃ?ಣಾಪುರದೊಡ್ಡಿಯ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಮುದ್ದುಶ್ರೀ ದಿಬ್ಬದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಬೆಳೆಸುವ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಚಟುವಟಿಕೆಗಳ ಮೂಲಕ ಎಲ್ಲರೊಳಗೂ ಅಡಗಿರುವ ಪ್ರತಿಭೆಯನ್ನು ಗುರುತಿಸಿ ನಾಯಕತ್ವದ ಪಾಠ ಮಾಡುವ ಹೊಸ ಮಾದರಿಯೊಂದರ ಅಗತ್ಯವನ್ನು ಒತ್ತಿ ಹೇಳಿದರು. ಸಮುದಾಯದ ಸದಸ್ಯನಾಗಿ, ಅದರ ಒಳಿತಿಗಾಗಿ ದುಡಿಯುವುದನ್ನು ಕಲಿಯಬೇಕಾದ ಅವಶ್ಯಕತೆಯಿದೆ ಎಂದರು. ಇಂದು ನಡೆಯುತ್ತಿರುವ ಜೆನ್ ಝಡ್ ಹೋರಾಟದ ರೂಪದಲ್ಲಿ ಹೊಸ ಹೋರಾಟವನ್ನು ರೂಪಿಸಬೇಕಾಗಿದೆ ಎಂದು ಅದರ ಸಾಧಕ ಬಾಧಕಗಳನ್ನು ಬಿಡಿಸಿಟ್ಟರು.

ಇಫ್ರೋ ಜಾನಪದ ಮಹಾವಿದ್ಯಾಲಯದ ನಿರ್ದೇಶಕ, ಜಾನಪದ ವಿದ್ವಾಂಸ ಡಾ.ಎಂ.ಬೈರೇಗೌಡ ಮಾತನಾಡಿ ನಮ್ಮೊಳಗೇ ಒಬ್ಬೊಬ್ಬ ನಾಯಕ ಅಡಗಿ ಕುಳಿತಿರುತ್ತಾನೆ. ನಾವು ಅವನಿಗೆ ಒಂದ?ು ಪೋ?ಕವೆನಿಸುವ ಇಂಬು ನೀಡಬೇಕಾದ ಅವಶ್ಯಕತೆಯಿದೆ ಎಂದು ಹೇಳಿದರು. ಮೊದಲು ಗ್ರಾಮೀಣ ಬದುಕಿನ ಚಿತ್ರಗಳನ್ನು ನಗರ ಕೇಂದ್ರಿತ ಮಕ್ಕಳ ಮನಸ್ಸಿನಲ್ಲಿ ಮೂಡಿಸುವ ಕೆಲಸ ಮೊದಲಾಗಬೇಕಾಗಿದೆ ಎಂದರು. ಒಂದೇ ನೆಲೆಯಲ್ಲಿ ಆಲೋಚನೆ ಮಾಡುವ ಈ ವಯೋಮಾನದ ಮಕ್ಕಳಲ್ಲಿ ಹೊಸತನದ ಹುಡುಕಾಟ ನಡೆಯಬೇಕಾಗಿದೆ ಎಂದರು.

ಶಿಬಿರ ನಿರ್ದೇಶಕ ರೇವಣ್ಣ ಮಾತನಾಡಿ ವಿದ್ಯಾರ್ಥಿ ಬದುಕಿನ ಬಹುಮುಖ್ಯ ಕೆಲಸವೆಂದರೆ ಸಹಪಾಠಿಗಳ ಜೊತೆಗಿನ ಸಂಬಂಧ ಹೇಗಿರಬೇಕೆಂಬ ತಿಳಿವಳಿಕೆಯನ್ನು ಮೊದಲು ಪಡೆದುಕೊಳ್ಳಬೇಕು. ಸಹವಾಸ ಮಾಡುವಾಗಲೇ ತಮ್ಮ ಗುರಿಯತ್ತ ನೋಡುವವರನ್ನು ಆಯ್ಕೆ ಮಾಡಿಕೊಂಡರೆ ಮುಂದಿನ ಬದುಕು ಸುಂದರವಾಗುತ್ತದೆ. ಈ ಶಿಬಿರ ಪಾಲ್ಗೊಂಡಿರುವ ಮಕ್ಕಳಲ್ಲಿ ಅಂತಹದ್ದೊಂದು ಜಾಗೃತಿ ಮೂಡಿಸಿ ಜತನ ಮಾಡುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತೇವೆ ಎಂದರು. ಯೋಜನಾ ಸಂಯೋಜಕ ಶಿವಕುಮಾರ್, ತುಮಕೂರು ಜಿಲ್ಲಾ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಕ್ಷೇತ್ರಕಾರ್ಯಕರ್ತರಾದ ಬಿ. ಹರ್ಷಿತ, ರಾಘವೇಂದ್ರ ಎನ್., ಡಿಜಿಟಲ್ ಲರ್ನಿಂಗ್ ಸೆಂಟರ್ ಸುಗಮಕಾರ್ತಿ ವಿನೋದಿನಿ, ಟ್ಯೂ?ನ್ ಟೀಚರ್ ಸಿರೀ?, ಜನಸಹಯೋಗದ ಮಾಜಿಸಿಬ್ಬಂದಿ ಸತೀಶ್ ಭಾಗವನಿಸಿದ್ದರು. ಬೆಂಗಳೂರಿನ ಕೊಳೆಗೇರಿ ಪ್ರದೇಶದ ನಲವತ್ತೆರಡು ಮಕ್ಕಳು ಈ ಶಿಬಿರದ ಲಾಭ ಪಡೆಯಲಿದ್ದಾರೆ.

# ದೈಹಿಕ, ಮಾನಸಿಕ ಸದೃಢತೆಗೆ ಕ್ರೀಡಾಕೂಟ ಪೂರಕ

**ಬಿ. ರಂಗೇಗೌಡ ಹೇಳಿಕೆ**



ಮೈಸೂರು: ಕೆಲಸದ ಒತ್ತಡದಲ್ಲೂ ಕ್ರೀಡಾಕೂಟ ಕಾರ್ಯಕ್ರಮಗಳು ನೌಕರರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಮನರಂಜನೆ ನೀಡಲು ಸಹಾಯಕವಾಗಲಿವೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ ಹೇಳಿದರು.

ಮೈಸೂರು ವಿಭಾಗದ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕೆಲಸದ ಒತ್ತಡದ ನಡುವೆ ಮನುಷ್ಯ ತನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಮರೆಯಬಾರದು. ಕ್ರೀಡೆಗಳು ನೌಕರರಲ್ಲಿ ಹೊಸ ಹುರುಪನ್ನು ತುಂಬಿ, ಕೆಲಸದಲ್ಲಿ ಹೆಚ್ಚಿನ ದಕ್ಷತೆ ತೋರಲು ಸಹಕಾರಿಯಾಗುತ್ತದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜನರ ಸೇವೆಯನ್ನು ಮಾಡುವ ಇಲಾಖೆಯಾಗಿದೆ. ಸಮಾಜ ಕಲ್ಯಾಣ ಇಲಾಖೆಯ ನೌಕರರು ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಹಾಗೂ ಮನರಂಜನೆ ಪಡೆಯಲು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆಗೆ ಸರ್ಕಾರದಿಂದ 1. ಕೋಟಿ ರೂ ಅನ್ನು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ನೀಡಲಾಗಿದೆ. ನೌಕರರು ಇಂತಹ ಕ್ರೀಡಾಕೂಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತೆ ನೌಕರರು ಮಕ್ಕಳಂತೆ ಬಾಲ್ಯದಲ್ಲಿ ಆಡುತ್ತಿದ್ದ ಆಟಗಳನ್ನು ನೆನಪಿಸಿಕೊಳ್ಳಬೇಕು. ಸಮಾಜ ಕಲ್ಯಾಣ ಇಲಾಖೆಯು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ನಾವೆಲ್ಲರೂ ಶ್ರಮಿಸಬೇಕಾಗಿದೆ ಎಂದು ಹೇಳಿದರು. ಜಿಲ್ಲೆಯ ಅಲೆಮಾರಿ ಸಮುದಾಯದಲ್ಲಿ ಮೊದಲ ಬಾರಿಗೆ ಕಾನೂನು ಪದವಿಯನ್ನು ಪಡೆದ ಕುಮಾರಿ ಅರುಣಾರನ್ನು ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಲಾಯಿತು. ಮೈಸೂರು ತಾಲೂಕಿನ ಸಹಾಯಕ ನಿರ್ದೇಶಕರಾದ ಜನಾರ್ಧನ್, ಚಾಮರಾಜನಗರ ಸಹಾಯಕ ನಿರ್ದೇಶಕ ಮೇಘ, ಕೆ ಆರ್.ನಗರದ ಸಹಾಯಕ ನಿರ್ದೇಶಕ ಶಂಕರ್ ಮೂರ್ತಿ, ನಂಜನಗೂಡು ತಾಲೂಕಿನ ಸಹಾಯಕ ನಿರ್ದೇಶಕ ಸಿದ್ಲಿಂಗು, ಗುಂಡ್ಲುಪೇಟೆ ತಾಲೂಕಿನ ಸಹಾಯಕ ನಿರ್ದೇಶಕ ಮೋಹನ್, ಪಿರಿಯಾಪಟ್ಟ ತಾಲೂಕಿನ ಸಹಾಯಕ ನಿರ್ದೇಶಕ ಚಂದ್ರಶೇಖರ್, ಎಚ್.ಡಿ.ಕೋಟೆ ತಾಲೂಕಿನ ಸಹಾಯಕ ನಿರ್ದೇಶಕ ರಮೇಶ್ ಉಪಸ್ಥಿತರಿದ್ದರು.

# ಬಜೆಟ್ ಅನುದಾನಕ್ಕೆ ಮನವಿ

ಮೈಸೂರು: ಪೌರ ಕಾರ್ಮಿಕರಿಗೆ ಸಂಬಂಧಿಸಿದ ವಿವಿಧ ಸಮಸ್ಯೆ ಗಳನ್ನು ಕುರಿತಂತೆ ಈ ಬಾರಿಯ ಬಜೆಟ್‌ನಲ್ಲಿ ಪರಿಹಾರೋಪಾಯ ಕ್ರಮ ಕೈಗೊಳ್ಳಬೇಕೆಂದು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮನವರಿಕೆ ಮಾಡಿಕೊಡಲಾಗಿದೆ ಎಂದು ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ರಾಜ್ಯಾಧ್ಯಕ್ಷ ನಾರಾಯಣ ತಿಳಿಸಿದರು.

ರಾಜ್ಯ ಸ್ಥಳೀಯ ಸಂಸ್ಥೆಗಳಲ್ಲಿರುವ ಸುಮಾರು 35 ಸಾವಿರ ಮಂದಿ ನೇರ ಪಾವತಿಯಲ್ಲಿ ಕೆಲಸ ಮಾಡುತ್ತಿದ್ದು, ಇವರಲ್ಲಿ 29 ಸಾವಿರ ಮಂದಿಯನ್ನು ಕಾಯಂ ಮಾಡಲಾಗಿದೆ. ಹೀಗಾಗಿ ಬಾಕಿ ಉಳಿದಿರುವ 6,800 ಮಂದಿಯನ್ನು ಸಹಾ ಕಾಯಂ ಮಾಡಬೇಕು, ಘನತ್ಯಾಜ್ಯ ಸ್ವಚ್ಛತಾ ವಾಹನ ಚಾಲಕರು, ಲೋಡ?ಸ್, ಕ್ಲೀನರ್‌ಗಳನ್ನು ಗುತ್ತಿಗೆ ಪದ್ಧತಿಯಿಂದ ವಿಮುಕ್ತಿಗೊಳಿಸಿ ನೇರ ವೇತನ ಪಾವತಿ ಮಾಡಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಕೋರಲಾಯಿತೆಂದರು. ಇನ್ನಿತರ ಪದಾಧಿಕಾರಿಗಳಾದ ಆರ್. ಶಿವಣ್ಣ, ಯತಿರಾಜ್, ಆರ್. ದಾಸು, ಆರ್ಟಿಸ್ಟ್ ಎಸ್.ನಾಗರಾಜ್, ಶ್ರೀನಿವಾಸ ಮೊದಲಾದವರು ಇದ್ದರು.




**ತೆರಿಗೆದಾರರ ತೊಂದರೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸುವೆ : ಟಿ.ಜಿ.ಸುರೇಶ್**

# ತೆರಿಗೆದಾರರು, ಸಲಹೆಗಾರರೊಂದಿಗೆ ಸಂವಾದ ಕಾರ್ಯಕ್ರಮ

ಚಾಮರಾಜನಗರ, ತೆರಿಗೆದಾರರು, ತೆರಿಗೆ ಸಲಹೆಗಾ ರರು ಯಾವುದೇ ಹಿಂಜರಿಕೆಇಲ್ಲದೆ ನಿಮ್ಮ ತೊಂದರೆ, ಸಂದೇಶಗಳು, ಸಲಹೆ, ಸೂಚನೆಗಳನ್ನು ತಮ್ಮ ಗಮನಕ್ಕೆ ತಂದರೆ ಮೇಲಾಧಿಕಾರಿಗಳು, ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನ ಮಾಡಲಾಗುವುದು ಎಂದು ಕೇಂದ್ರೀಯ ತೆರಿಗೆ ಸಹಾಯಕ ಆಯುಕ್ತ ಟಿ.ಜಿ.ಸುರೇಶ್ ಹೇಳಿದರು.

ನಗರದ ಭುಜಂಗೇಶ್ವರ ಬಡಾವಣೆಯಲ್ಲಿರುವ ಕೇಂದ್ರೀಯ ತೆರಿಗೆ ಅಧೀಕ್ಷಕರ ಕಾರ್ಯಾಲಯದಲ್ಲಿ ತರಿಗೆ ಇಲಾಖೆ ವತಿಯಿಂದ ತೆರಿಗೆದಾರರು, ತೆರಿಗೆ ಸಲಹೆಗಾರಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಜಿಎಸ್‌ಟಿ ಅರಂಭವಾ ಗುವ ಸಂದರ್ಭದಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವು. ಹೊಸ ತೆರಿಗೆ ಪದ್ಧತಿ ಆಗಿದ್ದರಿಂದ ಅದರ ಬಗ್ಗೆ ತಿಳಿಸಿಕೊಡಲು ಎಲ್ಲ ಕಡೆ ಸಾಕಷ್ಟು ಅರಿವು ಕಾರ್ಯಕ್ರಮಗಳನ್ನು ಮಾಡಿದ್ದೇವು. ಜಿಎಸ್‌ಟಿ ಬಂದು 9 ವರ್ಷಗಳು ಕಳೆದಿದೆ. ಆದರೂ ಇನ್ನೂ ಸಾಕಷ್ಟು ಅರಿವು ಅಗತ್ಯವಾಗಿದೆ ಎಂದರು.



ತೆರಿಗೆ ಪದ್ಧತಿ ಅನುಷ್ಟಾನದಲ್ಲಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿದ್ದೀರಿ. ಸಿಸ್ಟಂ ಸಮಸ್ಯೆಗಳು ಸಾಕಷ್ಟು ಇದ್ದಾವೆ. ಅದಕ್ಕೆ ಕೇಂದ್ರ ಸರ್ಕಾರದವರು ಏನು ಮಾಡಿದರೆ ಅಂದರೆ ಪ್ರತಿ ಎರಡು, ಮೂರು, ಆರು ತಿಂಗಳೊಮ್ಮೆ ತೆರಿಗೆದಾರರೊಡನೆ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ತೆರಿಗೆ ಪದ್ಧತಿ, ಅನುಷ್ಠಾನದಲ್ಲಿ ಕುಂದು-ಕೊರತೆಗಳು ಇರಬಹುದು ಅದರ ಬಗ್ಗೆ ಅವರಿಂದ ಸಲಹೆ, ಸೂಚನೆಗಳನ್ನು ಪಡೆದು ಸಂದೇಹಗಳನ್ನು ಪರಿಹರಿಸಲು ಸಂವಾದ ಕಾರ್ಯಕ್ರಮಗಳನ್ನು ಅಯೋಜಿಸುವಂತೆ ಆದೇಶಿಸಿದರು. ಅದರಂತೆ ಸಂವಾದಗಳನ್ನು ನಡೆಸಿಕೊಂಡು ಬರಲಾಗುತ್ತಿದ್ದು,

ಮೈಸೂರಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಆದರೆ ಚಾಮರಾಜನಗರದಲ್ಲಿ ಸೇರಿರುವ ತೆರಿಗೆದಾರರು, ಆಡಿಟರ್ ನೋಡಿ ತುಂಬಾ ಖುಷಿಯಾಗಿದೆ. ಇಂತಹ ಸ್ಪಂದನೆ ಮೈಸೂರಿನಲ್ಲಿ ಸಿಗಲಿಲ್ಲ. ಅದಕ್ಕಾಗಿ. ನಿಮಗೆಲ್ಲರಿಗೂ ಅಭಿನಂದನೆ ತಿಳಿಸುತ್ತೇವೆ. ನೀವು ಸಲಹೆ ಸೂಚನೆಗಳು ಸಂದೇಶ ಕೊಟ್ಟರೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸಲು ಪ್ರಯತ್ನ. ಮಾಡುತ್ತೇನೆ ಎಂದರು.

ಸಹಾಯಕ ಆಯುಕ್ತರಾದ ರಮೇಶ್‌ಕಂಚಿಬೈಲ್, ರಘುರಾಜು, ಶಿವಶಂಕರ್, ಮಾತನಾಡಿದರು. ಸಂವಾಧದಲ್ಲಿ ತೆರಿಗೆ ಸಲಹೆಗಾರರು ಸಲಹೆ, ಸೂಚನೆಗಳನ್ನು ನೀಡಿದರು. ಸಂವಾದದಲ್ಲಿ ತೆರಿಗೆ ಇಲಾಖೆಯ ಅಧೀಕ್ಷಕರಾದ ಪ್ರಸನ್ನಕುಮಾರ್, ಎಸ್.ವಿ.ಕೃಷ್ಣನ್ , ವೆಂಕಟಕೃಷ್ಣ , ಇನ್ಸ್ ಪೆಕ್ಟರ್ ಜಗದೀಶ್, ತೆರಿಗೆದಾರರು, ತೆರಿಗೆ ಸಲಹೆಗಾರರು ಭಾಗವಹಿಸಿದ್ದರು. ಆಡಿಟರ್ ವೆಂಕಟೇಶ್ ಪ್ರಾರ್ಥಿಸಿದರು.

# ಸಂಕ್ಷಿಪ್ತ ಸುದ್ದಿ

## ಮಿನಿ ಉದ್ಯೋಗ ಮೇಳ

**ತುಮಕೂರು:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಕ್ಯಾಡ್‌ಮಾರ್ಕ್ಸ್, ಎಸ್.ಎಂ.ಎಫ್.ಜಿ. ಇಂಡಿಯಾ ಕ್ರೆಡಿಟ್ ಕೋ. ಲಿ., ಬೆಲ್ಸ್ಟಾರ್ ಮೈಕ್ರೋ ಫೈನಾನ್ಸ್ ಲಿ. ಹಾಗೂ ಫಿಟ್ವೆಲ್ ಟೂಲ್ ಅಂಡ್ ಫಾರ್ಜಿಂಗ್ಸ್ ಲಿ. ಸಂಸ್ಥೆಯ ಸಹಭಾಗಿತ್ವದಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ಸಂಬಂಧ ಫೆಬ್ರವರಿ 26ರಂದು ಮಿನಿ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿದೆ.

ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ., ಡಿಪ್ಲೊಮಾ ಮತ್ತು ಯಾವುದೇ ಪದವಿ ಪಾಸಾದ ಅಭ್ಯರ್ಥಿಗಳು ಫೆಬ್ರವರಿ 26ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಡಿ.ಡಿ.ಪಿ.ಐ ಬಸ್ ನಿಲ್ದಾಣ, ವಾಸನ್ ಕಣ್ಣಿನ ಆಸ್ಪತ್ರೆ ಹತ್ತಿರ, ಮೂಲೆಮನೆ ಹೋಟಲ್ ಪಕ್ಕ, ಸೋಮೇಶ್ವರಪುರಂ, 14ನೇ ಕ್ರಾಸ್, ತುಮಕೂರು–572102, ಇಲ್ಲಿ ತಮ್ಮ ಸ್ವ ವಿವರದೊಂದಿಗೆ ಹಾಜರಾಗಲು ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0816–2278488, ಮೊ.ಸಂ. 8792669410ಯನ್ನು ಸಂಪರ್ಕಿಸಬಹುದಾಗಿದೆ.

## ವಿದ್ಯುತ್ ವ್ಯತ್ಯಯ

**ತುಮಕೂರು:** ಬೆಸ್ಕಾಂ ಗ್ರಾಮೀಣ ಉಪವಿಭಾಗ–2ರ ವ್ಯಾಪ್ತಿಯಲ್ಲಿ ಲಿಂಕ್ ಲೈನ್ ಕಾಮಗಾರಿ ಕೈಗೊಂಡಿರುವುದರಿಂದ ಫೆಬ್ರವರಿ 25ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹೆಬ್ಬೂರು, ಸಿರಿವರ, ಬಳ್ಳಗೆರೆ, ನಿಡುವಳಲು ಮತ್ತು ಕಣಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

## ಫೆ.25ರೊಳಗಾಗಿ ರೈತರು ಇ-ಕೆವೈಸಿ ಮಾಡಿಸಲು ಮನವಿ

**ತುಮಕೂರು:** ಕೇಂದ್ರ ಸರ್ಕಾರದ ಪ್ರಮುಖ ಯೋಜನೆಗಳಾದ ಬರಪರಿಹಾರ, ಬೆಳೆ ವಿಮೆ ಹಾಗೂ ಪಿ.ಎಂ. ಕಿಸಾನ್ ಯೋಜನೆಗಳಡಿ ಮತ್ತು ಇತರೆ ಇಲಾಖೆಯ ಯೋಜನೆ ಸೌಲಭ್ಯಗಳನ್ನು ಪಡೆಯಲು ಫೆಬ್ರವರಿ 25ರೊಳಗಾಗಿ ರೈತರು ಇ–ಕೆವೈಸಿ ಮಾಡಿಸಬೇಕೆಂದು ತುಮಕೂರು ತಾಲ್ಲೂಕು ತಹಶೀಲ್ದಾರ್ ರಾಜೇಶ್ವರಿ ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ಭೂ–ಹಿಡುವಳಿಗಳನ್ನು ಹೊಂದಿರುವ ರಾಜ್ಯದ ಎಲ್ಲಾ ರೈತರ ವಿವರಗಳನ್ನೊಳಗೊಂಡ State Farmer Registry ಸ್ಥಾಪಿಸಲು ಯೋಜಿಸಲಾಗಿದ್ದು, ರೈತರ ಇ–ಕೆವೈಸಿ ಮತ್ತು ರೈತರ ಸಹಮತಿ ಪತ್ರವನ್ನು ವಿದ್ಯುನ್ಮಾನ ರೀತಿಯಲ್ಲಿ ತೆಗೆದುಕೊಳ್ಳುವುದು ಕಡ್ಡಾಯವಾಗಿರುವುದರಿಂದ ರೈತರು ಸಮೀಪದ ರೈತ ಸಂಪರ್ಕ ಕೇಂದ್ರ, ಗ್ರಾಮ ಒನ್ ಕೇಂದ್ರ, ಕಂದಾಯ, ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳನ್ನು ತಮ್ಮ ಆಧಾರ್ ಕಾರ್ಡ್, ಆಧಾರ್‌ನೊಂದಿಗೆ ಜೋಡಣೆಯಾಗಿರುವ ಮೊಬೈಲ್, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಎಲ್ಲಾ ಪಹಣಿಗಳೊಂದಿಗೆ ಸಂಪರ್ಕಿಸಿ ಫೆಬ್ರವರಿ 25ರೊಳಗಾಗಿ ಇ–ಕೆವೈಸಿ ಮಾಡಿಸಬೇಕು. ತಪ್ಪಿದಲ್ಲಿ ಕೇಂದ್ರ/ರಾಜ್ಯ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುವಿರೆಂದು ಅವರು ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ತುಮಕೂರು:** ಪ್ರವಾಸೋದ್ಯಮ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸುವ ಸಲುವಾಗಿ 1 ತಿಂಗಳ ವಸತಿ ಸಹಿತ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟೀನ್ ನಡೆಸಲು ಸಹಾಯಧನ ನೀಡಲಾಗುವುದು. ಅರ್ಜಿದಾರರು ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದವರಾಗಿದ್ದು, 20 ರಿಂದ 55 ವರ್ಷದೊಳಗಿನವರಾಗಿರಬೇಕು. ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಲಘು ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ನಗರ ಪ್ರದೇಶದವರ ವಾರ್ಷಿಕ ಆದಾಯ 2 ಲಕ್ಷ ರೂ. ಹಾಗೂ ಗ್ರಾಮಾಂತರ ಪ್ರದೇಶದವರ ವಾರ್ಷಿಕ ಆದಾಯ 1.50ಲಕ್ಷ ರೂ.ಗಳನ್ನು ಮೀರಬಾರದು. ಯಾವುದೇ ಸರ್ಕಾರಿ ಇಲಾಖೆ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ನಿಗದಿತ ಅರ್ಜಿ ನಮೂನೆಯನ್ನು ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಕಚೇರಿಯಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯೊಂದಿಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ/ಆದಾಯ ಪ್ರಮಾಣಪತ್ರ, ಚಾಲ್ತಿಯಲ್ಲಿರುವ ಲಘು ವಾಹನ ಚಾಲನಾ ಪರವಾನಗಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಆಧಾರ್ ಕಾರ್ಡ್, ವಾಸಸ್ಥಳ ದೃಢೀಕರಣ ಪತ್ರ, ಯಾವುದೇ ಸರ್ಕಾರಿ ಇಲಾಖೆ/ನಿಗಮ/ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ ಸ್ವಯಂ ಪ್ರಮಾಣೀಕರಿಸಿ 100ರೂ. ಬೆಲೆಯ ಛಾಪಾ ಕಾಗದದಲ್ಲಿ ನಮೂನೆ–3ರಲ್ಲಿ ಪ್ರಮಾಣಪತ್ರ ಲಗತ್ತಿಸಬೇಕು. ಅಗತ್ಯ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ದ್ವಿಪ್ರತಿಯಲ್ಲಿ ಮಾರ್ಚ್ 13ರೊಳಗಾಗಿ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರೆಡ್‌ಕ್ರಾಸ್ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ: ಎಫ್ 232, ಅಶೋಕ ರಸ್ತೆ, ತುಮಕೂರು–572101 ಇವರಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 0816–2006349ನ್ನು ಸಂಪರ್ಕಿಸಬೇಕೆಂದು ಇಲಾಖೆಯ ಸಹಾಯಕ ನಿರ್ದೇಶಕ ಸಂಜೀವ್ ಕುಮಾರ್ ತಿಳಿಸಿದ್ದಾರೆ.

## ಇಂದು ಪೂರ್ವಭಾವಿ ಸಭೆ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾ.1 ರಂದು ಶ್ರೀರೇಣುಕಾಚಾರ್ಯ ಜಯಂತಿ ಹಾಗೂ ಮಾ.3 ರಂದು ಶ್ರೀಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚರಿಸಲು ಫೆ.24ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶ್ರೀರೇಣುಕಾಚಾರರ್ಯ ಜಯಂತಿ ಪೂರ್ವಭಾವಿ ಸಭೆ ಹಾಗೂ ಮಧ್ಯಾಹ್ನ 12 ಗಂಟೆಗೆ ಶ್ರೀ ಯೋಗಿನಾರೇಯಣ ಜತೀಂದ್ರರ ಜಯಂತಿ (ಕೈವಾರ ತಾತಯ್ಯ)ಯ ಪೂರ್ವಭಾವಿ ಸಭೆ ನಗರದ ಕಂದಾಯಭವನದಲ್ಲಿರುವ ಮೂರನೇ ಮಹಡಿಯ ಕೊಠಡಿ ಸಂಖ್ಯೆ: 409ರಲ್ಲಿ ಏರ್ಪಡಿಸಲಾಗಿರುತ್ತದೆ.

# ಬೀದಿ ನಾಯಿಗಳ ಹಾವಳಿ ನಿಯಂತ್ರಿಸಲು ಡಿಸಿ ಸೂಚನೆ

# ಸುಪ್ರೀಂ ಆದೇಶದಂತೆ ನೋಡೆಲ್ ಅಧಿಕಾರಿ ನೇಮಿಸಿ

**ಮಂಡ್ಯ:** ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ತಕ್ಷಣವೇ ಬೀದಿ ನಾಯಿಗಳ ನಿಯಂತ್ರಣಕ್ಕೆ ಕಾರ್ಯೋನ್ಮುಖರಾಗಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಸಭೆ ನಡೆಸಿ ಮಾತನಾಡಿದರು.

ಪ್ರತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಬೀದಿ ನಾಯಿಗಳ ಉಪಟಳ ತಡೆಯಲು ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು ಸಾರ್ವಜನಿಕ ಕಟ್ಟಡಗಳ ಸುತ್ತ ಆವರಣ ಗೋಡೆ ನಿರ್ಮಿಸಬೇಕು. ಬಸ್ ನಿಲ್ದಾಣದಲ್ಲಿ ಬೀದಿ ನಾಯಿಗಳು ಪ್ರವೇಶಿಸದಂತೆ, ಎಲ್ಲೆಂದರಲ್ಲಿ ತಿನಿಸು ಪದಾರ್ಥಗಳನ್ನು ಎಸೆಯದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.



**ಸಂತಾನಹರಣ ಶಸ್ತ್ರಚಿಕಿತ್ಸೆ:** ಎಲ್ಲಾ ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿ ಅವುಗಳನ್ನು ಸೂಕ್ತ ಆಶ್ರಯತಾಣಕ್ಕೆ ಸ್ಥಳಾಂತರಿಸಿ ರೇಬಿಸ್ ಲಸಿಕೆಗಳನ್ನು ಹಾಕಬೇಕಾಗುತ್ತದೆ.ಈ ಸಂಬಂಧ ಅಗತ್ಯ ಕ್ರಮ ವಹಿಸುವಂತೆ ಸಭೆಯಲ್ಲಿ ತಿಳಿಸಿದರು.

**ಆಶ್ರಯ ತಾಣಗಳ ನಿರ್ಮಾಣ:** ಪ್ರತಿ ತಾಲ್ಲೂಕಿನ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಒಂದರಂತೆ ಒಟ್ಟು 8 ಆಶ್ರಯ ತಾಣಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

ಇನ್ಸ್ಟಿಟ್ಯೂಟ್ ಆವರಣದಲ್ಲಿ ( ಶಾಲಾ, ಕಾಲೇಜು, ಬಸ್ ನಿಲ್ದಾಣ, ಆಸ್ಪತ್ರೆ ಆವರಣದಲ್ಲಿ) 190 ಬೀದಿ ನಾಯಿಗಳನ್ನು ಗುರುತಿಸಲಾಗಿದ್ದು ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿ ಮುಂದಿನ ದಿನಗಳಲ್ಲಿ ಆಶ್ರಯತಾಣಕ್ಕೆ ಸ್ಥಳಾಂತರಿಸಲು ಅಗತ್ಯ ಕ್ರಮವಹಿಸಿ ಎಂದು ಸಭೆಯಲ್ಲಿ ಮಾಹಿತಿ ನೀಡಿದರು.

ಆಹಾರದ ತ್ಯಾಜ್ಯಗಳು ನಾಯಿಗಳನ್ನು ಆಕರ್ಷಿಸುತ್ತವೆ, ಆದ್ದರಿಂದ ಕಸದ ಡಬ್ಬಿಗಳನ್ನು ಮುಚ್ಚಿಡಿ ಮತ್ತು ತ್ಯಾಜ್ಯವನ್ನು ಪ್ರತಿದಿನ ವಿಲೇವಾರಿ ಮಾಡಿ ಎಂದು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನರಸಿಂಹಮೂರ್ತಿ, ಪಶುಸಂಗೋಪನೆ ಇಲಾಖೆಯ ಉಪ ನಿರ್ದೇಶಕರಾದ ಶಿವಲಿಂಗಯ್ಯ, ನಗರಸಭೆ ಆಯುಕ್ತರಾದ ಪಂಪಶ್ರೀ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಮುದ್ರಣಕಾರರ ದಿನಾಚರಣೆ ಕಾರ್ಯಕ್ರಮ

**ಮಂಡ್ಯ:** ಜಿಲ್ಲಾ ಮುದ್ರಣಕಾರರ ಸಂಘದ ವತಿಯಿಂದ ಮುದ್ರಣ ರಂಗದ ಪಿತಾಮಹಾ ಜೋಹಾನ್ಸ್ ಗುಟೆನ್ ಬರ್ಗ್‌ರವರ ಸವಿನೆನಪಿನಲ್ಲಿ ಫೆ.24ರಂದು ಬೆಳಿಗ್ಗೆ 10.30ಕ್ಕೆ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಮುದ್ರಣಕಾರರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಜಿ.ಲಕ್ಷ್ಮಿನಾರಾಯಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿನ್ನದ ಕೆಲಸ ಮಾಡುತ್ತಿದ್ದ ಜೋಹಾನ್ಸ್ ಗುಟೆನ್ ಬರ್ಗ್ ಅವರು ಬೈಬಲ್‌ನ ಪ್ರತಿಗಳನ್ನು ಇತರರಿಗೆ ಒದಗಿಸುವ ಉದ್ದೇಶದಿಂದ ಕಬ್ಬಿಣದಿಂದ ಮುದ್ರಣದ ಅಚ್ಚುಗಳನ್ನು ತಯಾರಿಸಿ ಒಂದು ರೂಪಕೊಟ್ಟು ಮುದ್ರಣ ಮಾಡುವ ವಿಧಾನ ಕಂಡು ಹಿಡಿದರು ಎಂದರು.




ಕಾರ್ಯಕ್ರಮವನ್ನು ಶಾಸಕ ಪಿ.ರವಿಕುಮಾರ್ ಗೌಡ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಜಿ.ಲಕ್ಷ್ಮಿನಾರಾಯಣ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಎಸ್ಪಿ ಡಾ.ವಿ.ಜೆ.ಶೋಭರಾಣಿ, ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ, ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘದ ಉಪಸಂಚಾಲಕ ಎಂ.ಎಸ್.ಸತೀಶ್, ಮಂಡ್ಯ ಜಿಲ್ಲಾ ಮುದ್ರಣಕಾರರ ಸಂಘದ ಕಾರ್ಯಾಧ್ಯಕ್ಷ ಎಂ.ಎಸ್.ಶಿವಪ್ರಕಾಶ್ ಉಪಸ್ಥಿತರಿರುವರು. ಇದೇ ವೇಳೆ ಹಿರಿಯ ಮುದ್ರಣಕಾರ ಎ.ಎಂ. ಗಿರೀಶ್, ಅಂಗವಿಕಲ ಮುದ್ರಣಾಕಾರ ಜೆ.ಎನ್.ಮುಕುಂದರಾವ್ ಅವರನ್ನು ಅಭಿನಂದಿಸಲಾಗುವುದು ಎಂದು ಹೇಳಿದರು. ಗೋಷ್ಠಿಯಲ್ಲಿ ರಾಜ್ಯ ಸಂಚಾಲಕ ಎಂ.ಎಸ್.ಸತೀಶ್, ಕಾರ್ಯದರ್ಶಿ ಆರ್.ರವೀಂದ್ರ ಇದ್ದರು.

## ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸಿ

**ಮಂಡ್ಯ:** ಮಾರ್ಚ್ ಮಾಹೆಯಲ್ಲಿ ಬರುವ ಶ್ರೀರೇಣುಕಾಚಾರ್ಯ ಜಯಂತಿ ಮತ್ತು ಯೋಗಿನಾರೇಯಣಯತೀಂದ್ರರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿ ಎಂದು ಹೇಳಿದರು.



ಮಾರ್ಚ್ ಮಾಹೆಯಲ್ಲಿ ಬರುವ ಮಹನೀಯರ ಜಯಂತಿ ಆಚರಣೆಯ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕತೆ ವಹಿಸಿ ಮಾತನಾಡಿದರು.

ಮಹನೀಯರ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಬೇಕು.ಗಣ್ಯರಿಗೆ ಮಹನೀಯರ ಜಯಂತಿ ಕಾರ್ಯಕ್ರಮದ ಆಹ್ವಾನ ಪತ್ರಿಕೆ ನೀಡಿ ಆಹ್ವಾನಿಸಬೇಕು ಮತ್ತು ವೇದಿಕೆಯನ್ನು ಸ್ವಚತೆಯಿಂದ ನೋಡಿಕೊಳ್ಳುವುದು. ಮಹನೀಯರ ಭಾವಚಿತ್ರಗಳ ಬ್ಯಾನರ್ ಗಳನ್ನು ಅಳವಡಿಸಬೇಕು ಮತ್ತು ಸಮುದಾಯದಲ್ಲಿ ಸಾಧನೆ ಮಾಡಿರುವಂತಹ ಸಮುದಾಯದ ಗಣ್ಯರಿಗೆ ಗೌರವವನ್ನು ಸೂಚಿಸಬೇಕು.

ಸಮುದಾಯದ ವಿಚಾರಕರು ಮತ್ತು ಚಿಂತಕರಿಂದ ಸಮುದಾಯದ ಅರಿವಿನ ಬಗ್ಗೆ ಉಪನ್ಯಾಸವನ್ನು ಮಾಡಿಸಬೇಕು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಮತ್ತು ವೇದಿಕೆ ಅಲಂಕಾರ–ಸೌಂಡ್ಸ್ ಲೈಟಿಂಗ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಬಿ. ವಿ. ನಂದೀಶ್,ಸಮುದಾಯದ ಮುಖಂಡರುಗಳಾದ ವೇಕಟೇಶ್, ಷಡಕ್ಷರಿ, ಚನ್ನಕೇಶವ, ಎಂ. ವಿ. ಸ್ವರ್ಣ ಕುಮಾರ್, ಕೆ. ನಾಗನಂದ, ಹೆಚ್. ಪಿ.ಮೋಹನ್, ಕೆ.ವಿ.ಮೋಹನ್ ಕುಮಾರ್, ಕೇಶವಮೂರ್ತಿ ರವರು ಉಪಸ್ಥಿತರಿದ್ದರು.

## ಮುಕ್ತ ಹಾಗೂ ನಿರ್ಭೀತಿ ಪರೀಕ್ಷೆಗೆ ಸಕಲ ಸಿದ್ದತೆ: ಡೀಸಿ



**ತುಮಕೂರು:** ಜಿಲ್ಲೆಯಲ್ಲಿ ಫೆಬ್ರವರಿ 28 ರಿಂದ ಮಾರ್ಚ್ 17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದ್ದು, ಮುಕ್ತ ಹಾಗೂ ನಿರ್ಭೀತಿ ವ್ಯವಸ್ಥೆಯಲ್ಲಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಸೋಮವಾರ ದ್ವಿತೀಯ ಪಿಯುಸಿ ಪರೀಕ್ಷೆ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಸಿದ್ಧತೆ ಕುರಿತು ವಿವರ ನೀಡಿದ ಅವರು, ಪ್ರಸಕ್ತ ಸಾಲಿನಲ್ಲಿ 24753 ವಿದ್ಯಾರ್ಥಿಗಳು ಜಿಲ್ಲೆಯ 41 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲಿದ್ದು, ಯಾವುದೇ ಲೋಪವಿಲ್ಲದಂತೆ ಪಾರದರ್ಶಕವಾಗಿ ನಡೆಸಲು ಎಲ್ಲಾ ತಯಾರಿಯನ್ನು ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ವಿದ್ಯಾರ್ಥಿಗಳು ನಿರ್ಭಿಡೆಯಿಂದ ಪರೀಕ್ಷೆ ಬರೆಯಲು ಮಧುರ ವಾತಾವರಣವನ್ನು ನಿರ್ಮಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪ್ರಶ್ನೆ ಪತ್ರಿಕೆಗಳನ್ನು ಸೂಕ್ತ ಭದ್ರತೆಯಲ್ಲಿ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಅವರು ಹೇಳಿದರು.

ತುಮಕೂರು ಜಿಲ್ಲೆಯ 2 ಶೈಕ್ಷಣಿಕ ಜಿಲ್ಲೆಗಳ ಪೈಕಿ ತುಮಕೂರಿನ 30 ಕೇಂದ್ರಗಳು ಹಾಗೂ ಮಧುಗಿರಿಯ 11 ಕೇಂದ್ರಗಳು ಸೇರಿ ಒಟ್ಟು 41 ಪರೀಕ್ಷಾ ಕೇಂದ್ರಗಳಲ್ಲಿ ಹೊಸದಾಗಿ 22851 ವಿದ್ಯಾರ್ಥಿಗಳು, ಖಾಸಗಿಯಾಗಿ 285 ವಿದ್ಯಾರ್ಥಿಗಳು, 1606 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 11 ಫಲಿತಾಂಶ ಸುಧಾರಣೆ ವಿದ್ಯಾರ್ಥಿಗಳು ಸೇರಿ ಒಟ್ಟು 24753 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ ಎಂದ ಅವರು, ವಿದ್ಯಾರ್ಥಿಗಳು ಯಾವುದೇ ಗೊಂದಲಕ್ಕೆ ಒಳಗಾಗದೆ ವರ್ಷವಿಡೀ ವ್ಯಾಸಂಗ ಮಾಡಿರುವ ಜ್ಞಾನವನ್ನು ಅಂದಿನ ಪರೀಕ್ಷೆಯಲ್ಲಿ ಯಾವುದೇ ಆತಂಕವಿಲ್ಲದೆ ನಿರ್ಭಿಡೆಯಿಂದ ಪರೀಕ್ಷೆ ಬರೆಯುವಂತೆ ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಶುಭಾಶಯ ಕೋರಿದರು. ಈ ಪರೀಕ್ಷೆಯ ನಂತರವೂ ಅನುತ್ತೀರ್ಣರಾದಲ್ಲಿ ಇನ್ನೂ 2 ಅವಕಾಶಗಳು ಪರೀಕ್ಷೆ ಬರೆಯಲು ಇದ್ದು, ಅಂತಹ ವಿದ್ಯಾರ್ಥಿಗಳು ಆತಂಕಪಡುವ ಅಗತ್ಯವಿಲ್ಲ ಎಂದರು. ಯಾವುದಾದರೂ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಆತಂಕ ಅಥವಾ ಸಮಸ್ಯೆಗಳಿದ್ದಲ್ಲಿ ಕಂಟ್ರೋಲ್ ರೂಮ್ ನಂಬರ್ 1098ಗೆ ಕರೆ ಮಾಡಿ ಮಾತನಾಡಬಹುದು ಎಂದು ಅವರು ತಿಳಿಸಿದರು.

## ಎಲ್ಲರೂ ಸಾಮಾಜಿಕ ಸೇವಾ ಮನೋಭಾವನೆ ಅಳವಡಿಸಿಕೊಳ್ಳಬೇಕು: ಕೆ.ಸಿ.ಪುಟ್ಟಸಿದ್ದಶೆಟ್ಟಿ

**ಮೈಸೂರು:** ಪ್ರತಿಯೊಬ್ಬರೂ ಕೂಡ ಸಾಮಾಜಿಕ ಸೇವಾ ಮನೋಭಾವನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಹೇಳಿದರು.

ಅವರು ನಗರದ ರೋಟರಿ ಭವನದಲ್ಲಿ ಕೆ.ಆರ್.ನಗರದ ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ನಾಡಿನ ಸಾಧಕರುಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನಾವುಗಳುಯಾವಕ್ಷೇತ್ರದಲ್ಲಿನಮ್ಮನ್ನುತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದೇವೋ ಅದರಲ್ಲಿ ನಿಸ್ವಾರ್ಥ ಮನೋಭಾವನೆಯಿಂದ ಕಾರ್ಯನಿರ್ವಹಿಸಬೇಕು. ಆ ದಾರಿಯಲ್ಲಿ ಎಲ್ಲರೂ ಸಾಗಬೇಕು ಎಂದರು. ಸಂಘಟನೆಗಳು ಸದಾ ಕ್ರಿಯಾಶೀಲವಾಗಿದ್ದುಕೊಂಡು ವಿವಿಧ ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಜಿ ಎಸ್ ಟಿ ಆಪೀಲು ನ್ಯಾಯಾಧಿಕರಣ ತಾಂತ್ರಿಕ ಸದಸ್ಯ (ಕರ್ನಾಟಕ ರಾಜ್ಯ) ಡಿ.ಜಗನ್ನಾಥ್ ಸಾಗರ್ ಮಾತನಾಡಿ ಸಮಾಜದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಎಲೆ ಮರೆಯ ಕಾಯಿಯಂತೆ ಇದ್ದುಕೊಂಡು ಸೇವೆಯನ್ನು ಮಾಡುತ್ತಿರುವಂತಹ ಸಾಧಕರುಗಳನ್ನು ಸಂಘ – ಸಂಸ್ಥೆಗಳು ಗುರುತಿಸಿ ಗೌರವಿಸುವ ಕೆಲಸವನ್ನು ಮಾಡಬೇಕು. ಆ ನಿಟ್ಟಿನಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ನಾಡಿನ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿರುವ ಸಾಧಕರನ್ನು ಅಭಿನಂದಿಸುವ ಕಾರ್ಯ ಮಾಡಿರುವುದು ಉತ್ತಮ ಕಾರ್ಯವಾಗಿದೆ. ಆ ಮೂಲಕ ಸಾಧಕರುಗಳನ್ನು ಸಮಾಜಕ್ಕೆ ಪರಿಚಯಿಸುವುದರ ಜೊತೆಗೆ ಅವರ ಜವಾಬ್ದಾರಿಯನ್ನು ಹೆಚ್ಚಿಸಿದೆ. ಇಂತಹ ಸಾಮಾಜಿಕ ಸೇವಾ ಕಾರ್ಯಕ್ಕೆ ಸರ್ವರೂ ಕೈಜೋಡಿಸಬೇಕೆಂದು ಕರೆ ನೀಡಿದರು. ಸೈಬರ್ ಕ್ರೈಂ ಡಿವೈಎಸ್ಪಿ ಆರ್.ಶ್ರೀಕಾಂತ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ವಿವಿಧ ಮಾದರಿಯ ಅಪರಾಧ ಪ್ರಕರಣಗಳ ಬಗ್ಗೆ ಸಾರ್ವಜನಿಕರು ಸದಾ ಜಾಗೃತಿವಹಿಸಬೇಕು. ಯಾವುದಾದರೂ ಇಂತಹ ವಿಚಾರಗಳಿಗೆ ಸಂಬಂಧಿಸಿದ ಮಾಹಿತಿ ತಿಳಿದರೆ ತಕ್ಷಣವೇ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಅಂತಹ ಘಟನೆಗಳು ನಡೆಯದಂತೆ ಇಲಾಖೆಯೊಂದಿಗೆ ಸಾರ್ವಜನಿಕರು ಕೈಜೋಡಿಸಬೇಕೆಂದು ಮನವಿ ಮಾಡಿದರು.




ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಸಾಲಿಗ್ರಾಮದ ಶ್ರೀ ದ್ವಯ ಸಿದ್ಧಾಂತ ಪೀಠ ಶ್ರೀ ಭಾಷ್ಯಾಕಾರ ಸ್ವಾಮಿ ದೇವಸ್ಥಾನದ ಶ್ರೀ ಧನುರ್ ದಾಸ ರಾಮಾನುಜ ಜೀಯರ್ ಸ್ವಾಮಿಗಳು ಮಾತನಾಡಿ ಯಾರಾದರೂ ನಮ್ಮ ಸುತ್ತಮುತ್ತಲಿನಲ್ಲಿ ಕಷ್ಟಗಳಲ್ಲಿ ಸಿಲುಕಿದರೆ ಅಂತಹವರ ನೆರವಿಗೆ ಸರ್ವರು ಕೈಜೋಡಿಸುವಂತಹ ಕೆಲಸವನ್ನು ಮಾಡಬೇಕು. ನಮ್ಮ ಕೈಯಲ್ಲಿ ಯಾವ ಕೆಲಸವನ್ನು ಮಾಡಲು ಸಾಧ್ಯವೋ ಅದನ್ನು ಅತ್ಯಂತ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಮಾಡಿದಾಗ ಅದರಲ್ಲಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಎಲ್ಲರೂ ಕೂಡ ತಮ್ಮ ಅಳಿಲು ಸೇವೆಯನ್ನು ಸಮಾಜಕ್ಕೆ ನೀಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್. ಆರ್.ನಾರಾಯಣರಾವ್, ನಿರ್ದೇಶಕ ಇಂದ್ರೇಶ್, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್, ನಿರ್ದೇಶಕ ಎಂ.ಎಸ್.ನರಸಿಂಹ, ನಿವೃತ್ತ ಪ್ರಾಂಶುಪಾಲ ಡಾ.ಎಂ. ಗೋವಿಂದರಾಜು, ಮುಖ್ಯ ಶಿಕ್ಷಕ ಎಚ್.ಪಿ.ಲೋಕೇಶ್, ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ವಿನೋದ್, ಜಿಲ್ಲಾ ಭಗೀರಥ ಉಪ್ಪಾರ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಗೌರಮ್ಮ, ನಿವೃತ್ತ ಅರಣ್ಯ ಅಧಿಕಾರಿ ಮಲ್ಲಶೆಟ್ಟಿ, ನಿವೃತ್ತ ಎ ಎಸ್ ಐ ಜವರಶೆಟ್ಟಿ, ಕಾರ್ಮಿಕ ಸಂಘಟನೆಯ ನಾಗೇಶ್, ಕೆ.ಆರ್.ನಗರ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ

ಟಿ.ರವಿ, ಕೆ.ಆರ್.ನಗರ ತಾಲ್ಲೂಕು ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ಮಹದೇವ, ನಿವೃತ್ತ ಶಿಕ್ಷಕ ಸುಂದರ ಕುಮಾರ್, ಮುಖಂಡರುಗಳಾದ ಪ್ರದೀಪ್, ಮಹದೇವ, ಸುಧಾಕರ್ ಸೇರಿದಂತೆ ಹಲವರು ಇದ್ದರು.

**ಸನ್ಮಾನಿತರುಗಳು:** ವಿವಿಧ ಕ್ಷೇತ್ರಗಳ ನಾಡಿನ ಸಾಧಕರುಗಳಾದ ಸೋಮಶೇಖರ್, ಬಿ.ಪಿ.ಕುಮಾರ್, ಎನ್.ಅಜ್ಜಪ್ಪ, ಡಾ.ವಿ.ದೇವಿಕಾ, ಕರಳಾಪುರ ನಾಗರಾಜು, ಸಿ.ಕೆ.ಬಾಲಮನೋಹರ ಇದ್ದರು.

## ದೈಹಿಕ–ಮಾನಸಿಕ ಸದೃಢತೆಗೆ ಕ್ರೀಡಾಕೂಟ ಪೂರಕ

**ಮೈಸೂರು:** ಕೆಲಸದ ಒತ್ತಡದಲ್ಲೂ ಕ್ರೀಡಾಕೂಟ ಕಾರ್ಯಕ್ರಮಗಳು ನೌಕರರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಮನರಂಜನೆ ನೀಡಲು ಸಹಾಯಕವಾಗಲಿವೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಬಿ. ರಂಗೇಗೌಡ ಅವರು ಹೇಳಿದರು.

ಸೋಮವಾರ ಮೈಸೂರು ವಿಭಾಗದ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿ, ಕೆಲಸದ ಒತ್ತಡದ ನಡುವೆ ಮನುಷ್ಯ ತನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಮರೆಯಬಾರದು. ಕ್ರೀಡೆಗಳು ನೌಕರರಲ್ಲಿ ಹೊಸ ಹುರುಪನ್ನು ತುಂಬಿ, ಕೆಲಸದಲ್ಲಿ ಹೆಚ್ಚಿನ ದಕ್ಷತೆ ತೋರಲು ಸಹಕಾರಿಯಾಗುತ್ತದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜನರ ಸೇವೆಯನ್ನು ಮಾಡುವ ಇಲಾಖೆಯಾಗಿದೆ. ಸಮಾಜ ಕಲ್ಯಾಣ ಇಲಾಖೆಯ ನೌಕರರು ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಹಾಗೂ ಮನರಂಜನೆ ಪಡೆಯಲು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕಾಗಿದೆ ಎಂದರು.



ಸಮಾಜ ಕಲ್ಯಾಣ ಇಲಾಖೆಗೆ ಸರ್ಕಾರದಿಂದ 1. ಕೋಟಿ ರೂ ಅನ್ನು ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ನೀಡಲಾಗಿದೆ. ನೌಕರರು ಇಂತಹ ಕ್ರೀಡಾಕೂಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮತ್ತೆ ನೌಕರರು ಮಕ್ಕಳಂತೆ ಬಾಲ್ಯದಲ್ಲಿ ಆಡುತ್ತಿದ್ದ ಆಟಗಳನ್ನು ನೆನಪಿಸಿಕೊಳ್ಳಬೇಕು. ಸಮಾಜ ಕಲ್ಯಾಣ ಇಲಾಖೆಯು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ನಾವೆಲ್ಲರೂ ಶ್ರಮಿಸಬೇಕಾಗಿದೆ ಎಂದು ಹೇಳಿದರು.

ಮೈಸೂರು ಜಿಲ್ಲೆಯ ಅಲೆಮಾರಿ ಸಮುದಾಯದಲ್ಲಿ ಮೊದಲ ಬಾರಿಗೆ ಕಾನೂನು ಪದವಿಯನ್ನು ಪಡೆದ ಕುಮಾರಿ ಅರುಣಾ ರವರನ್ನು ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ತಾಲೂಕಿನ ಸಹಾಯಕ ನಿರ್ದೇಶಕರಾದ ಜನಾರ್ಧನ್, ಚಾಮರಾಜನಗರ ತಾಲೂಕಿನ ಸಹಾಯಕ ನಿರ್ದೇಶಕರಾದ ಮೇಘ, ಕೆ ಆರ್ ನಗರದ ಸಹಾಯಕ ನಿರ್ದೇಶಕರಾದ ಶಂಕರ್ ಮೂರ್ತಿ, ನಂಜನಗೂಡು ತಾಲೂಕಿನ ಸಹಾಯಕ ನಿರ್ದೇಶಕರಾದ ಸಿದ್ಧಿಂಗು, ಗುಂಡ್ಲುಪೇಟೆ ತಾಲೂಕಿನ ಸಹಾಯಕ ನಿರ್ದೇಶಕರಾದ ಮೋಹನ್, ಪಿರಿಯಾಪಟ್ಟ ತಾಲೂಕಿನ ಸಹಾಯಕ ನಿರ್ದೇಶಕರಾದ ಚಂದ್ರಶೇಖರ್, ಎಚ್ ಡಿ ಕೋಟೆ ತಾಲೂಕಿನ ಸಹಾಯಕ ನಿರ್ದೇಶಕರಾದ ರಮೇಶ್, ಸಮಾಜ ಕಲ್ಯಾಣ ಇಲಾಖೆಯ ನೌಕರರು ಮತ್ತಿತರರು ಉಪಸ್ಥಿತರಿದ್ದರು.

## ಸಮವಸ್ತ್ರ ವಿತರಣೆ

**ಮಂಡ್ಯ:** ನಗರದ ಕಾಳೇಗೌಡ ಪ್ರೌಢಶಾಲೆ ಆವರಣದಲ್ಲಿ ಎಲ್ಲರೊಳಗೊಂದಾಗು ವಿನಯ್ ಸ್ನೇಹ ಬಳಗದ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರವನ್ನು ವಿತರಿಸಲಾಯಿತು. ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಂ.ವಿನಯ್ ಕುಮಾರ್ ಮಾತನಾಡಿ, ನನ್ನ ಜನ್ಮದಿನದ ಅಂಗವಾಗಿ ಸಮಾಜ ಮುಖಿ ಕಾರ್ಯಕ್ರಮ ಮಾಡುವ ಉದ್ದೇಶದಿಂದ ಇಂದು ಕಾಳೇಗೌಡ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡಿದ್ದು 36ನೇವರ್ಷದ ಜನ್ಮದಿನ ಅಂಗವಾಗಿ 36 ಸಮಾಜಮುಖಿ ಸೇವೆ ಮಾಡಿ ಸಾರ್ಥಕತೆ ಜೀವನ ನಡೆಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಂ.ಎಸ್.ರಾಜೇಂದ್ರ ಪ್ರಸಾದ್ ಟ್ರಸ್ಟ್ ಕಾರ್ಯದರ್ಶಿ ನಾಗರತ್ನ, ಆಲಯನ್ಸ್ ಮೋಹನ್ ಕುಮಾರ್, ಶಿಕ್ಷಕರಾದ ಉಮೇಶ್, ಮೋಹನ್, ರಾಥೋಡ್, ಗೋವಿಂದರಾಜು ಭಾಗವಹಿಸಿದ್ದರು.



# ಒಕ್ಕಲಿಗ ಮುದ್ದಣ್ಣ





| ವೀಣಾ ಹೇಮಂತ್‌ಗೌಡ ಪಾಟೀಲ್

ಬೇಸಾಯದ ಪರಿಕಲ್ಪನೆಯಲ್ಲಿ ಬದುಕನ್ನು ಅಳವಡಿಸಿ ಅತ್ಯಂತ ಸರಳವಾದ ವಚನಗಳನ್ನು ರಚಿಸಿದವರು ಒಕ್ಕಲಿಗ ಮುದ್ದಣ್ಣ. ಒಕ್ಕಲುತನವನ್ನೇ ತಮ್ಮ ಕಾಯಕವನ್ನಾಗಿಸಿಕೊಂಡು ಜಂಗಮ ದಾಸೋಹವನ್ನು

ತಮ್ಮ ಬದುಕಿನ ಭಾಗವನ್ನಾಗಿಸಿಕೊಂಡ ಒಕ್ಕಲಿಗ ಮುದ್ದಣ್ಣನವರು 12ನೇ ಶತಮಾನದ ಓರ್ವ ವಚನಕಾರ.

ಇಂದಿನ ವಿಜಯಪುರ ಜಿಲ್ಲೆಯ ಜೋಳದ ಹಾಳ ಗ್ರಾಮದಲ್ಲಿ ಜನಿಸಿದ ಅವರು ಒಕ್ಕಲಿಗ ಮುದ್ದಣ್ಣ

ಕಾಮಭೀಮ ಜೀವ ಧನದೊಡೆಯ ಎಂಬ ಅಂಕಿತ ನಾಮದಲ್ಲಿ ಇವರ 12 ವಚನಗಳು ಲಭ್ಯವಾಗಿವೆ

ಒಕ್ಕಲುತನವನ್ನೇ ಮುಖ್ಯ ಕಾಯಕವನ್ನಾಗಿಸಿಕೊಂಡ ಮುದ್ದಣ್ಣನವರು ತಾವು ಬೆಳೆದ ಬೆಳೆಗೆ ಹೆಚ್ಚಿನ ಕರವನ್ನು ವಿಧಿಸಿದ ಮಹಾರಾಜರ ಆಜ್ಞೆಯನ್ನು ತಿರಸ್ಕರಿಸಿ ಆ ಕರದ ಹಣವನ್ನು ದಾಸೋಹಕ್ಕೆ ವಿನಿಯೋಗಿಸಿದ ಗಟ್ಟಿ ವ್ಯಕ್ತಿ. ಮುಂದೆ ಆತನ ಈ ನಡೆಯನ್ನು ಮಹಾರಾಜರು ಕೂಡ ಪ್ರಶಂಶಿಸಿದರು ಎಂಬುದು ಅವರ ದೃಢತೆಯ ನಿಲುವಿಗೆ ಸಾಕ್ಷಿಯಾಗಿ ಕಾಣುತ್ತದೆ

ಕೇವಲ ಜ್ಞಾನವನ್ನು ಹೊಂದಿದ್ದರೆ ಸಾಲದು ಅದಕ್ಕೆ ತಕ್ಕ ಕ್ರಿಯೆಗಳನ್ನು ಮಾಡಬೇಕು ಎಂಬ ಸಾತ್ವಿಕ ಹಠವನ್ನು ಹೊಂದಿದ ಒಕ್ಕಲಿಗ ಮುದ್ದಣ್ಣನವರು ನುಡಿದಂತೆ ನಡೆದ ನಿಜಘನ ಶರಣರು.

ಒಕ್ಕಲುತನದ ಮಹತ್ವವನ್ನು ಎಲ್ಲರೂ ಅರಿಯಲಿ. ಒಕ್ಕಲುತನ ಎಂಬುದು ಜಗದ ಜನರಿಗೆ ಉಣ ಬಡಿಸುವ ಸೃಷ್ಟಿಕ್ರಿಯೆಯ ಮತ್ತೊಂದು ರೂಪ ಎಂದು ಅವರು ಅತ್ಯಂತ ಹೆಮ್ಮೆಯಿಂದ ಹೇಳುತ್ತಿದ್ದರು.

ನಮ್ಮ ಬದುಕಿನಲ್ಲಿ ಧನ ಕನಕಗಳು ಶಾಶ್ವತವಲ್ಲ, ಸುಖ ಸಂಪತ್ತುಗಳು ಕೂಡ ನಮ್ಮೊಂದಿಗೆ ಯಾವಾಗಲೂ ಇರುವುದಿಲ್ಲ... ಆದ್ದರಿಂದ ನಮ್ಮ ಅಂಗವನ್ನೇ ಭೂಮಿಯನ್ನಾಗಿಸಿಕೊಂಡು ಅದರಲ್ಲಿ ಉತ್ತಮವಾದ ಬದುಕಿನ ಇಳುವರಿಯನ್ನು ಆಧ್ಯಾತ್ಮ, ದಾಸೋಹ ಹಾಗೂ ಕಾಯಕ ನಿಷ್ಠೆಗಳ ಮೂಲಕ ಪಡೆಯುವ ವಿಧಾನವನ್ನು ಅವರು ತಮ್ಮ ವಚನಗಳ ಮೂಲಕ ಸಾರಿ ಹೇಳಿದ್ದಾರೆ.

ಆಗಿನ ಕಾಲದಲ್ಲಿ ಭೂ ರಕ್ಷಣೆ, ಜಾನುವಾರುಗಳ ಪೋಷಣೆ, ಮಳೆ ಬೆಳೆಗಳ ಮಾಹಿತಿ ಮುಂತಾದ ತಿಳಿವಳಿಕೆಗಳನ್ನು ಹೊಂದಿದ್ದ ಒಕ್ಕಲಿಗ ಮುದ್ದಣ್ಣ ಆದರ್ಶ ಶರಣ ಎಂದರೆ ತಪ್ಪಿಲ್ಲ.

ಕೃಷಿಯ ಪರಿಸರದಲ್ಲಿ ಬರುವ ನೇಗಿಲು ಹೊಲ ಬೀಜ ಬೆಳೆ ಮುಂತಾದ ರೂಪಕಗಳ ಮೂಲಕ ಆಧ್ಯಾತ್ಮಿಕ ಸತ್ಯಗಳನ್ನು ವಚನಗಳ ರೂಪದಲ್ಲಿ ರಚಿಸಿದ ಇವರು ಕಾಯಕವೇ ಕೈಲಾಸ ತತ್ವವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅಂಗವೇ ಭೂಮಿಯಾಗಿ ಲಿಂಗವೇ ಬೆಳೆಯಾಗಿಸಿ ಬದುಕಿದ ನೇಗಿಲ ಯೋಗಿ ಅವರಾಗಿದ್ದರು.

ವೇದ ಶಾಸ್ತ್ರವನೋದುವುದಕ್ಕೆ ಹಾರುವನಲ್ಲ
ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ
ವ್ಯವಹರಿಸುವುದಕ್ಕೆ ವೈಶ್ಯನಲ್ಲ
ಕಾಮಭೀಮ ಜೀವಧನದೊಡೆಯ ನೀನೇ ಬಲ್ಲೆ

ಎಂದು ಒಕ್ಕಲುತನದ ಕಾಯಕದ ಕುರಿತು ಅತ್ಯಂತ ಹೆಮ್ಮೆಯಿಂದ ಅವರು ತಮ್ಮ ವಚನದಲ್ಲಿ ಹೇಳಿದ್ದಾರೆ.

**ಪೈರಿಗೆ ನೀರು ಬೇಕೆಂಬಲ್ಲಿ**
**ಉಚಿತವನರಿದು ಬಿಡಬೇಕು**
**ಕ್ರೀಗೆ ಅರಿವು ಬೇಕೆಂಬಲ್ಲಿ**
**ಉಭಯನರಿದು ಘಟಿಸಬೇಕು**
**ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ**
**ಮೀರಿದರುಂಟೆ**
**ಕ್ರಿಯೆ ಬಿಡಲಿಲ್ಲ ಅರಿವ ಮರೆಯಲಿಲ್ಲ**
**ಬೆಳೆಯ ಕೊಯಿದ ಮತ್ತೆ ಹೊಲಕ್ಕೆ ಕಾವಲುಂಟೆ**
**ಫಲವ ಹೊತ್ತ ಪೈರಿನಂತೆ**
**ಪೈರನೊಳಕೊಂಡ ಫಲದಂತೆ**
**ಅರಿವು ಆಚರಣೆಯೆಲ್ಲ ನಿಂದು**
**ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ**
**ಕಾಮಭೀಮ**
ಜೀವಧನನೊಡೆಯನೆಂಬುದ ಭಾವಿಸಲಿಲ್ಲ.

ಹೊಲದಲ್ಲಿ ಬೆಳೆಯುವ ಪೈರಿಗೆ ನೀರು ಬಿಡುವಾಗ ಬೆಳೆಯ ಸೂಕ್ಷ್ಮತೆಯನ್ನು ಅರಿತು ಹೆಚ್ಚು ಕಡಿಮೆ ನೀರನ್ನು ಹಾಯಿಸದೆ ಅವಶ್ಯಕತೆ ಇದ್ದಷ್ಟೇ ಹಾಯಿಸಬೇಕು, ಇಲ್ಲದಿದ್ದರೆ ಬೆಳೆ ಹಾಳಾಗುತ್ತದೆ. ಅಂತೆಯೇ ನಮ್ಮ ಬದುಕಿನಲ್ಲಿ ಅರಿವು ಮತ್ತು ಕ್ರಿಯೆಗಳು ಪರಸ್ಪರ ಪೂರಕವಾಗಿರಬೇಕು.

ಉಪೇಕ್ಷಿತ ವಚನಕಾರರು

ಕೆರೆಯನ್ನು ಕಟ್ಟುವಾಗ ನಿರ್ಮಿಸುವ ವ್ಯಕ್ತಿ ಎಷ್ಟು ಜಾಗರೂಕತೆಯಿಂದ ಇದ್ದರೂ ಸಾಲದು ಕೆರೆ ತುಂಬಿ ನೀರು ಹೊರ ಚೆಲ್ಲುವಂತಹ ಕೋಡಿಯ ವ್ಯವಸ್ಥೆಯನ್ನು ಮಾಡದಿದ್ದರೆ ಕೆರೆ ಹಾಳಾಗುತ್ತದೆ ಅಂತೆಯೇ ನಮ್ಮ ಬದುಕಿನಲ್ಲಿ ಕೂಡ ಅರಿವಿನಿಂದ ಕೂಡಿದ ಕೆಲಸಗಳನ್ನು ಮಾಡಬೇಕು. ಬೆಳೆದು ನಿಂತ ಬೆಳೆಯನ್ನು ಕೊಯ್ಯುವ ಮೊದಲು ಹೊಲಕ್ಕೆ ಕಾವಲಿರಬೇಕೇ ಹೊರತು ನಂತರ ಅಲ್ಲ ಎಂಬ ಅರಿವನ್ನು ಹೊಂದಿರಬೇಕು ಎಂಬುದನ್ನು ಮುದ್ದಣ್ಣ ತನ್ನ ವಚನಗಳಲ್ಲಿ ಒಕ್ಕಲುತನ ಹಾಗೂ ಬದುಕನ್ನು ಸಮೀಕರಿಸಿ ತಿಳುವಳಿಕೆಯನ್ನು ಹೇಳುತ್ತಾನೆ.

ಶರಣರು ತಮ್ಮ ಬದುಕಿನಲ್ಲಿ ನಡೆ–ನುಡಿಗಳನ್ನು ಒಂದಾಗಿಸಿ ನುಡಿದಂತೆ ನಡೆದ, ನಡೆದಂತೆ ನುಡಿದ ಗಟ್ಟಿತನವನ್ನು ಹೊಂದಿದ ದೃಢ ಘನ ಶರಣರಾಗಿದ್ದರು..... ಅಂತಹ ದೊಡ್ಡ ಶರಣರಲ್ಲಿ ಒಬ್ಬರಾದ ಒಕ್ಕಲಿಗ ಮುದ್ದಣ್ಣನವರಿಗೆ ಶರಣು ಶರಣಾರ್ಥಿ.

# ಸಿಸಿಟಿವಿ ಕಣ್ಗಾವಲಿನಲ್ಲಿ ಪಿಯು ಎಕ್ಸಾಂ: ಡೀಸಿ




**ಮಂಡ್ಯ:** ಫೆಬ್ರವರಿ 28 ರಿಂದ ಮಾರ್ಚ್ 17 ವರೆಗೆ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ ಬೆಳ್ಳಿಗೆ 10 ಗಂಟೆಯಿಂದ 1 ಗಂಟೆಯವರೆಗೂ ನಡೆಯಲಿದ್ದು ಪರೀಕ್ಷೆಯಲ್ಲಿ ಯಾವುದೇ ಲೋಪ ಉಂಟಾಗದಂತೆ ಪಾರದರ್ಶಕವಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪಿಯುಸಿ ಪರೀಕ್ಷೆ –1 ಅನ್ನು ಸುವ್ಯವಸ್ಥಿತವಾಗಿ ನಡೆಸುವ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸದರಿ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಒಟ್ಟು 14187 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದು 1096 ವಿದ್ಯಾರ್ಥಿಗಳು ಮರು ಪರೀಕ್ಷೆ ಬರೆಯಲಿದ್ದಾರೆ ಎಂದು ಹೇಳಿದರು.

27 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್ ಹಾಗೂ ಸೈಬರ್ ಕೇಂದ್ರಗಳನ್ನು ಮುಚ್ಚಲಾಗುವುದು. ಜಿಲ್ಲಾ ಖಜಾನೆಯಿಂದ ಪ್ರಶ್ನಾ ಪತ್ರಿಕೆಯನ್ನು ತ್ರಿಸದಸ್ಯ ಸಮಿತಿಯಿಂದ ದೂರದ ಪರೀಕ್ಷಾ ಕೇಂದ್ರಗಳಾದ ಕೆ.ಆರ್ ಪೇಟೆ, ನಾಗಮಂಗಲ, ಪಾಂಡವಪುರಕ್ಕೆ ಮುಂಚಿತವಾಗಿ ತಲುಪಿಸಲಾಗುತ್ತದೆ. ಪ್ರಶ್ನಾ ಪತ್ರಿಕೆಯನ್ನು ಸಾಗಿಸುವಾಗ ಬೀಗಿ ಭದ್ರತೆಯನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಸಿಸಿಟಿವಿ ಕಣ್ಗಾವಲು: ದ್ವಿತೀಯ ಪಿಯುಸಿ ಪರೀಕ್ಷೆ ಸಿಸಿಟಿವಿ ಕಣ್ಗಾವಲಿನಲ್ಲಿ ನಡೆಯಲಿದ್ದು ಒಟ್ಟು 580 ಕ್ಕೂ ಹೆಚ್ಚು ಕ್ಯಾಮೆರಾಗಳನ್ನು ಪರೀಕ್ಷಾ ಕೊಠಡಿಗಳಿಗೆ ಈಗಾಗಲೇ ಅಳವಡಿಸಲಾಗಿದೆ. ಪ್ರತಿಯೊಂದು ಪರೀಕ್ಷಾ ಕೊಠಡಿಯಲ್ಲಿ ಸಿಸಿಟಿವಿ ಕಡ್ಡಾಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರೀಕ್ಷೆ ಸಮಯದಲ್ಲಿ ಸಿಸಿಟಿವಿಗಳಲ್ಲಿ ತಾಂತ್ರಿಕ ದೋಷ ಉಂಟಾಗುತ್ತದೆ ಕ್ರಮ ವಹಿಸಬೇಕು. ಪರೀಕ್ಷೆ ನಡೆಯುವ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು.

**ಪರೀಕ್ಷಾ ಕೇಂದ್ರಗಳಲ್ಲಿ ಮೂಲ ಸೌಕರ್ಯ ಕಲ್ಪಿಸಿ**

ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸ್ಮಾರ್ಟ್ ಡಿವೈಸ್ ಗಳನ್ನು ಕೊಠಡಿಗೆ ತರಲು ಬಿಡಬೇಡಿ. ಪರೀಕ್ಷೆ ಮೇಲ್ವಿಚಾರಣೆಗೆ ನೇಮಿಸಿರುವ ಶಿಕ್ಷಕರು ಮಾರ್ಗ ಸೂಚಿಗೆ ಬದ್ಧರಾಗಿ ಕರ್ತವ್ಯ ಪಾಲಿಸಬೇಕು. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಚಿತ್ರೀಕರಣ ಮಾಡಲು ಯಾರಿಗೂ ಅನುಮತಿ ನೀಡಬಾರದು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್ ನಂದಿನಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ ಚಲುವಯ್ಯ, ತಹಶೀಲ್ದಾರ್ ಗಳಾದ ವಿಶ್ವನಾಥ, ಆದರ್ಶ್, ಅಶೋಕ್, ಚೇತನ ಯಾದವ್, ನಗರಾಭಿವೃದ್ಧಿ ಕೋಶಾಧಿಕಾರಿ ನರಸಿಂಹಮೂರ್ತಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಬದುಕು ಕಷ್ಟಗಳ ಸರಮಾಲೆಯಲ್ಲ





| ಪುಷ್ಪ ಪ್ರಸಾದ್

ನಾವು ನಮ್ಮ ಜೀವನದಲ್ಲಿ ಚಿಕ್ಕ ಪುಟ್ಟ ಸಮಸ್ಯೆಗಳನ್ನು ಎದುರಿಸದ ಹೊರತು ದೊಡ್ಡ ಆಸೆ–ಕನಸುಗಳನ್ನು ಈಡೇರಿಸಿಕೊಳ್ಳುವುದು ಸಾಧ್ಯವಿಲ್ಲ. ನಮ್ಮ ಸಾಮಾನ್ಯ ಸಮಸ್ಯೆಗಳು ಅಥವಾ ಅದಕ್ಕಿರುವ ಪರಿಹಾರಗಳು ಕೆಲವರ ಬದುಕನ್ನೇ ಬದಲಿಸಿ ಬಿಡುತ್ತವೆ. ಜೀವನದಲ್ಲಿ ಬದಲಾವಣೆ ಎಂದರೆ ಒಂದೋ ಒಳ್ಳೆಯದಾಗುವುದು ಅಥವಾ ಕೆಟ್ಟ ಅನುಭವ ಆಗುವುದು. ಹೊಸ ನೀರು ಬಂದಾಗ ಹಳೆ ನೀರು ಕೊಚ್ಚಿ ಹೋಗಲೇ ಬೇಕಲ್ವಾ? ಒಂದು ಸಮಸ್ಯೆ ಮುಗಿದು ಖುಷಿ ಪಡುವಷ್ಟರಲ್ಲಿ ಮತ್ತೊಂದು ಸಮಸ್ಯೆ ಎದುರಾಗಬಹುದು. ಬದುಕು ಅಂದ್ರೆ ಇಷ್ಟೆ ಎಂಬ ಆಲೋಚನೆಗಳು ನಮ್ಮ ಮನದಲ್ಲಿ ಬೇರೂರಿಬಿಟ್ಟಿರುತ್ತವೆ. ತಾನೆಲ್ಲೋ ಒಂದು ಕಡೆ ಕೆಲಸಕ್ಕೆ ಸೇರಿಕೊಂಡು ಆರಂಭದಲ್ಲಿ ಖುಷಿ ಕೊಟ್ಟ ಕೆಲಸ ದಿನ ಕಳೆದಂತೆ ಅಲ್ಲಿನ ವಾತಾವರಣ ಅಥವಾ ತಾವಿರುವಲ್ಲಿಯ ಊಟ ತಿಂಡಿ, ಅಥವಾ ಮನೆ ಕಡೆಯ ನೆನಪು, ಇಲ್ಲಿ ಏನೂ ಇಲ್ಲ ಎನ್ನುವ ಅನುಭವ ಆಗುವುದು ಸಹಜ, ಅಥವಾ ಅವರು ಕೊಡುವ ಸಂಬಳ ಆ ದಿನಗಳಿಗೆ ತುಸು ಹೆಚ್ಚೇ ಅನಿಸಿದರೂ ಕೂಡ ಆರು ತಿಂಗಳಲ್ಲಿ ಆ ಕೆಲಸಕ್ಕೆ ಗುಡ್ ಬೈ ಹೇಳಿ ಅಲ್ಲಿಂದ ಈಚೆ ಬಂದ ನಂತರ ಅದರ ಸಂತಂಸ, ತೃಪ್ತಿ ಇಲ್ಲದಾಗಬಹುದು, ಕಾಲ ಎಲ್ಲವನ್ನು ಬದಲಾಯಿಸಿಬಿಟ್ಟಿರುತ್ತದೆ. ಆಗ ಸಮಸ್ಯೆಗಳು ಹೆಚ್ಚಾಗತೊಡಗುತ್ತವೆ ಇದು ವಾಸ್ತವ. ಹಣಕಾಸಿನ ಕೊರತೆಯಿಂದಾಗಿಯೇ ಬದುಕಿನ ಹಲವು ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಆಗಲೇ ಮತ್ತೊಂದು ಉದ್ಯೋಗ ಹುಡುಕುವ ಚಿಂತೆ ಶುರುವಾಗುವುದು. ಯಾವ ಕೆಲಸವಾದರೂ ಏನಂತೆ? ಸ್ವಲ್ಪ ಹೆಚ್ಚಿಗೆ ಸಂಬಳ ಸಿಕ್ಕರೆ ಸಾಕು. ಹಾಗಂತ ಬಯಸಿದ ಕೂಡಲೇ ಎಲ್ಲವೂ ಸಿಗುವುದಾದರೆ ಪ್ರಯತ್ನಗಳಿಗೆ ಅರ್ಥವೇ ಇರುತ್ತಿರಲಿಲ್ಲ ಅಲ್ಲವೇ? ಉದ್ಯೋಗ ಸಮಸ್ಯೆಯ ಜತೆಗೆ ಇಷ್ಟೆಲ್ಲಾ ಆದರೂ ನನ್ನನ್ನು ಯಾರೂ ಕೇಳುವವರಿಲ್ಲ ಅನ್ನುವ ತಲೆ ನೋವು ಮನದೊಳಗೆ ಕಾಡಬಹುದು. ನಿದ್ರೆ ಬಾರದು, ಊಟ ಸೇರದು, ದಿನವಿಡೀ ಜೀವನದ ಸಮಸ್ಯೆಗಳ ಕುರಿತ ಚಿಂತೆಯಲ್ಲಿ ಖಿನ್ನತೆಯ ಸಮಸ್ಯೆಯನ್ನು ಎದುರಿಸಬೇಕಾಗಿ ಬರಬಹುದು. ಹಾಗಂತ ಅಲ್ಲಿಗೆ ಬದುಕು ಮುಗಿದು ಹೋಯಿತು ಎಂದು ಭಾವಿಸಿದರೆ ಅದು ನಮ್ಮ ದಡ್ಡತನ. ಕೆಲವೊಮ್ಮೆ ಸಮಸ್ಯೆಗಳು ಸುರುಳಿ ಸುರುಳಿಯಾಗಿ ಎಲ್ಲಿ ಆರಂಭವಾಗುತ್ತದೋ ಅಲ್ಲಿ ಬಂದು ನಿಲ್ಲುತ್ತವೆ. ಅಂತಹ ಸಂದರ್ಭದಲ್ಲಿ ನಾನನಾ ತರದ ಗೊಂದಲದ ವಿಚಾರಗಳು ನಮ್ಮ ಮನದಲ್ಲಿ ಹರಿದಾಡುತ್ತಿರುತ್ತವೆ.

ಎರಡು ರೀತಿಯ ಭಾವನೆಗಳು, ಲೋಚನೆಗಳು ಮೂಡತೊಡಗುತ್ತವೆ. ಆಗ ಕಷ್ಟಗಳು/ಸಮಸ್ಯೆಗಳು ಬದುಕನ್ನು ಛಲದಿಂದ ಸ್ವೀಕರಿಸುವ ಗುಣವನ್ನು ಬೆಳೆಸುತ್ತದೆ, ಇನ್ನು ಕೆಲವೊಮ್ಮೆ ಬದುಕಿನ ಬಗ್ಗೆ ನಿರಾಶಭಾವವನ್ನು ಮೂಡಿಸುತ್ತದೆ. ಆಯ್ಕೆ ನಮ್ಮದು. ಹಾಗಾಗಿ ಇಲ್ಲಿ ವೈಯಕ್ತಿಕ ನಿರ್ಧಾರಗಳು ಬಹಳ ಪರಿಣಾಮಕಾರಿಯಾಗಿರುತ್ತದೆ. ಎಷ್ಟೋ ಬಾರಿ ನಮ್ಮವರದೇ ಸಮಸ್ಯೆಗಳಿಗೆ ಕಿವಿಯಾಗುತ್ತೇವೆಯೇ ಹೊತರು ಧ್ವನಿಯಾಗುವುದಕ್ಕೆ ಸಿದ್ಧರಿರುವುದಿಲ್ಲ. ಯಾರದೋ ಸಮಸ್ಯೆಯಾಗಿರಲಿ ಅವರಿಗೊಂದು ಧೈರ್ಯದ ಮಾತು ಹೇಳಬೇಕಾದ್ದು ನಮ್ಮ ಕರ್ತವ್ಯವಾಗಬೇಕು ಅಲ್ಲವೇ? ಅದರಿಂದ ಅವರ ಬದುಕೇ ಬದಲಾಗಬಹುದು. ನೊಂದ ಮನಸ್ಸಿಗೆ ಆ ಹೊತ್ತಿಗಾದರೂ ಸಾಂತ್ವನ ಸಿಗಬಹುದು. ಆಗಬಹುದಾದ ಅನಾಹುತ ತಪ್ಪಬಹುದು. ಕಷ್ಟಗಳಿರುವುದು ಹಂಚಿಕೊಳ್ಳುವುದಕ್ಕಲ್ಲ, ಅನುಭವಿಸುವುದಕ್ಕೆ ಅನ್ನುವ ಮನಸ್ಥಿತಿ ಬಿಟ್ಟುಬಿಡಬೇಕು, ಜೀವನ ಅಂದ ಮೇಲೆ ಕೆಲವರಾದರೂ ಹಿತೈಷಿಗಳಿರುತ್ತಾರೆ ಅನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ನಮ್ಮ ಸಮಸ್ಯೆಗಳನ್ನು ನಮ್ಮ ಆಪ್ತರಲ್ಲಿ ಕೆಲವರೊಂದಿಗೆ ಹಂಚಿಕೊಂಡರೆ ಬದುಕು ಕಷ್ಟಗಳ ಸರಮಾಲೆಯಲ್ಲ, ಬದುಕಿನಲ್ಲಿ ಬದುಕು ಇದೆ ಅನ್ನುವ ಸಂತೃಪ್ತ ಭಾವ ಮೂಡುವುದರಲ್ಲಿ ಎರಡು ಮಾತಿಲ್ಲ.

# "ಬಾಳಿದರೆ ಬರಡು ಭೂಮಿಯನ್ನು ನಂದನವನವನ್ನಾಗಿಸಬೇಕು



ಬದುಕಿನ ಅರ್ಥ: ಕೇವಲ ವರ್ಷಗಳ ಎಣಿಕೆಯಲ್ಲ, ಗುಣಮಟ್ಟದ ಪಯಣ

ನಮ್ಮ ಹಿರಿಯರು ಒಂದು ಮಾತನ್ನು ಆಡುತ್ತಿದ್ದರು: "ಬಾಳಿದರೆ ಬರಡು ಭೂಮಿಯನ್ನು ನಂದನವನವನ್ನಾಗಿಸಬೇಕು." ಇದರರ್ಥ ನಾವು ಎಷ್ಟು ಕಾಲ ಭೂಮಿಯ ಮೇಲಿದ್ದೇವೆ ಎನ್ನುವುದಕ್ಕಿಂತ, ಆ ಕಾಲವನ್ನು ಹೇಗೆ ಕಳೆದಿದ್ದೇವೆ ಎನ್ನುವುದು ಮುಖ್ಯ. ಇಂದಿನ ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನ ಮತ್ತು ವೈದ್ಯಕೀಯ ಲೋಕ ಅಭೂತಪೂರ್ವ ಪ್ರಗತಿ ಸಾಧಿಸಿದೆ. ಮನುಷ್ಯನ ಸರಾಸರಿ ಆಯಸ್ಸು (Life Span) ಏರಿಕೆಯಾಗಿದೆ. ಆದರೆ, ಈ ಏರಿಕೆಯಾದ ಆಯಸ್ಸು ನಮಗೆ ನೆಮ್ಮದಿಯನ್ನು ತಂದಿದೆಯೇ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾವು 'ಹೆಲ್ತ್ ಸ್ಪ್ಯಾನ್' (Health Span) ಮತ್ತು 'ಜಾಯ್ ಸ್ಪ್ಯಾನ್' (Joy Span) ಎಂಬ ಪರಿಕಲ್ಪನೆಗಳನ್ನು ಆಳವಾಗಿ ಅಭ್ಯಾಸ ಮಾಡಬೇಕಿದೆ.

1. ಆಯಸ್ಸು (Life Span): ಕೇವಲ ಅಂಕಿ–ಅಂಶಗಳ ಆಟವಲ್ಲ
   ಜೀವಿತಾವಧಿ ಎನ್ನುವುದು ಒಂದು ಸಂಖ್ಯೆ. ಇಂದು ಭಾರತದಲ್ಲಿ ಸರಾಸರಿ ಜೀವಿತಾವಧಿ ಸುಮಾರು 70 ವರ್ಷಗಳಿಗೆ ಏರಿದೆ. ನೂರು ವರ್ಷಗಳ ಹಿಂದೆ ಇದು ಕೇವಲ 30–35 ವರ್ಷಗಳಷ್ಟಿತ್ತು. ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ಸುಧಾರಿತ ಚಿಕಿತ್ಸೆಗಳಿಂದಾಗಿ ನಾವು ಸಾವನ್ನು ಮುಂದೂಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಆದರೆ, ಸಾವನ್ನು ಮುಂದೂಡುವುದು ಎಂದರೆ ಬದುಕನ್ನು ವಿಸ್ತರಿಸುವುದು ಎಂದರ್ಥವಲ್ಲ.
   ಒಬ್ಬ ವ್ಯಕ್ತಿ 90 ವರ್ಷ ಬದುಕಿ, ಅದರಲ್ಲಿ ಕೊನೆಯ 20 ವರ್ಷಗಳನ್ನು ಐಸಿಯು (ICU) ಅಥವಾ ವೃದ್ಧಾಶ್ರಮದ ಮೌನದಲ್ಲಿ ಕಳೆದರೆ, ಅದನ್ನು ನಾವು "ಯಶಸ್ವಿ ಜೀವನ" ಎನ್ನಲು ಸಾಧ್ಯವೇ? ಖಂಡಿತ ಇಲ್ಲ. ದೀರ್ಘಾಯುಷ್ಯ ಎನ್ನುವುದು ನಮಗೆ ಪ್ರಕೃತಿ ನೀಡಿದ ವರವಾಗಬೇಕೇ ಹೊರತು, ಅದು ಶಾಪವಾಗಬಾರದು. ಇಲ್ಲಿಯೇ ನಮಗೆ ಆರೋಗ್ಯದ ಆಯಸ್ಸಿನ ಅಗತ್ಯವಿರುವುದು.
2. ಆರೋಗ್ಯದ ಆಯಸ್ಸು (Health Span):
   'ಹೆಲ್ತ್ ಸ್ಪ್ಯಾನ್' ಎಂದರೆ ನಾವು ಯಾವುದೇ ಪರಾವಲಂಬನೆಯಿಲ್ಲದೆ, ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದೊಂದಿಗೆ ಬದುಕುವ ಕಾಲ. ನಮ್ಮ ಹಳ್ಳಿಗಳಲ್ಲಿ ಇಂದಿಗೂ 80 ವರ್ಷದ ಅಜ್ಜಿಯರು ಬೆಳಿಗ್ಗೆ ಎದ್ದು ಮನೆಗೆಲಸ ಮಾಡಿ, ತೋಟಕ್ಕೆ ಹೋಗುವುದನ್ನು ಕಾಣುತ್ತೇವೆ. ಅವರಿಗೆ ಡಯಾಬಿಟಿಸ್ ಇಲ್ಲ, ರಕ್ತದೊತ್ತಡದ ತೊಂದರೆಯಿಲ್ಲ. ಇದು ಅವರ 'ಹೆಲ್ತ್ ಸ್ಪ್ಯಾನ್'.
   ದುರದೃಷ್ಟವಶಾತ್, ಇಂದಿನ ನಗರ ಜೀವನದಲ್ಲಿ 40ನೇ ವಯಸ್ಸಿಗೆ ಮನುಷ್ಯ ಹತ್ತು ಹನ್ನೆರಡು ಮಾತ್ರೆಗಳನ್ನು ನುಂಗಲು ಶುರುಮಾಡುತ್ತಿದ್ದಾನೆ. ನಾವು ಬದುಕುತ್ತಿದ್ದೇವೆ, ಆದರೆ ನಮ್ಮ ದೇಹ ನಮಗೆ ಸಾಥ್ ನೀಡುತ್ತಿಲ್ಲ. ಆರೋಗ್ಯದ ಆಯಸ್ಸನ್ನು ಹೆಚ್ಚಿಸಿಕೊಳ್ಳಲು ನಾವು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

* ಜೈವಿಕ ಗಡಿಯಾರ (Circadian Rhythm): ಪ್ರಕೃತಿಯ ಜೊತೆಗೆ ನಮ್ಮ ದೇಹದ ಗಡಿಯಾರವನ್ನು ಹೊಂದಿಸಿಕೊಳ್ಳುವುದು. ಸೂರ್ಯೋದಯಕ್ಕೆ ಮುನ್ನ ಏಳುವುದು ಮತ್ತು ಸೂರ್ಯಾಸ್ತದ ನಂತರ ಲಘು ಆಹಾರ ಸೇವಿಸುವುದು ನಮ್ಮ ಹಿರಿಯರ ಆರೋಗ್ಯದ ರಹಸ್ಯವಾಗಿತ್ತು.
* ಸ್ನಾಯುಗಳ ಬಲ (Muscle Mass): ವಯಸ್ಸಾದಂತೆ ಸ್ನಾಯುಗಳು ಕ್ಷೀಣಿಸುತ್ತವೆ. ಕೇವಲ ನಡಿಗೆ ಸಾಲದು, ದೇಹಕ್ಕೆ ಸ್ವಲ್ಪ ಮಟ್ಟಿನ ಶ್ರಮದ ಕೆಲಸಗಳು ಅಥವಾ ಯೋಗಾಸನಗಳ ಅಗತ್ಯವಿದೆ. 'ಬಳಸದಿದ್ದರೆ ಕಳೆದುಕೊಳ್ಳುವಿರಿ' (Use it or lose it) ಎಂಬ ತತ್ವ ಇಲ್ಲಿ ಅನ್ವಯಿಸುತ್ತದೆ.
* ಮನಸ್ಸು ಮತ್ತು ಮೆದುಳಿನ ಆರೋಗ್ಯ: ಅಲ್ಜೈಮರ್ಸ್ ಅಥವಾ ಮರೆವಿನ ಕಾಯಿಲೆಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಮೆದುಳನ್ನು ಸಕ್ರಿಯವಾಗಿರಿಸಲು ಓದುವುದು, ಬರೆಯುವುದು ಮತ್ತು ಹೊಸ ವಿಷಯಗಳನ್ನು ಕಲಿಯುವುದು ಬಹಳ ಮುಖ್ಯ.

3. ಸಂತಸದ ಆಯಸ್ಸು (Joy Span):
   ಆರೋಗ್ಯವಿದ್ದ ಮಾತ್ರಕ್ಕೆ ಜೀವನ ಪರಿಪೂರ್ಣವಾಗುವುದಿಲ್ಲ. ಎಷ್ಟೋ ಜನರಿದ್ದಾರೆ, ಅವರಿಗೆ ಯಾವುದೇ ಕಾಯಿಲೆ ಇರುವುದಿಲ್ಲ, ಸಾಕಷ್ಟು ಹಣವಿರುತ್ತದೆ, ಆದರೆ ಅವರ ಕಣ್ಣುಗಳಲ್ಲಿ ಹೊಳಪಿರುವುದಿಲ್ಲ, ಮುಖದಲ್ಲಿ ಮಂದಹಾಸವಿರುವುದಿಲ್ಲ. ಇದನ್ನೇ ನಾವು 'ಸಂತಸದ ಆಯಸ್ಸಿನ' ಕೊರತೆ ಎಂದು ಹೇಳುವುದು.
   ಜಾಯ್ ಸ್ಪ್ಯಾನ್ ಎಂದರೆ ನಾವು ಎಷ್ಟು ಕಾಲ ಬದುಕಿನ ಸಣ್ಣ ಸಣ್ಣ ಕ್ಷಣಗಳನ್ನು ಸಂಭ್ರಮಿಸುತ್ತೇವೆ ಎಂಬುದು. ಭಾರತೀಯ ಸಂಸ್ಕೃತಿಯಲ್ಲಿ 'ಆನಂದ'ಕ್ಕೆ ಹೆಚ್ಚಿನ ಮಹತ್ವವಿದೆ. ಇದು ಕೇವಲ ಐಷಾರಾಮಿ ಜೀವನದಿಂದ ಸಿಗುವ ಸುಖವಲ್ಲ, ಇದು ಒಳಗಿನಿಂದ ಬರುವ ತೃಪ್ತಿ.

* ಸಂಬಂಧಗಳ ಬೆಲೆ: ಇಂದಿನ ಡಿಜಿಟಲ್ ಯುಗದಲ್ಲಿ ನಮ್ಮಲ್ಲಿ ಸಾವಿರಾರು 'ಫ್ರೆಂಡ್ಸ್' ಇದ್ದಾರೆ, ಆದರೆ ಕಷ್ಟದ ಸಮಯದಲ್ಲಿ ಹೆಗಲು ನೀಡುವ ಹತ್ತಿರದವರ ಸಂಖ್ಯೆ ಕಡಿಮೆಯಾಗುತ್ತಿದೆ.

ಒಂಟಿತನವು ಆರೋಗ್ಯಕ್ಕೆ ಧೂಮಪಾನಕ್ಕಿಂತಲೂ ಹಾನಿಕಾರಕ ಎಂದು ಸಂಶೋಧನೆಗಳು ಹೇಳುತ್ತವೆ. ಪ್ರೀತಿಪಾತ್ರರ ಜೊತೆ ಕಳೆಯುವ ಸಮಯ ನಮ್ಮ ಜಾಯ್ ಸ್ಪ್ಯಾನ್ ಹೆಚ್ಚಿಸುತ್ತದೆ.

* ಉದ್ದೇಶಪೂರಿತ ಜೀವನ (Sense of Purpose): ಜಪಾನಿಯರ 'ಇಕಿಗಾಯ್' (Ikigai) ಎಂಬ ಪರಿಕಲ್ಪನೆಯಂತೆ, ಬೆಳಿಗ್ಗೆ ಎದ್ದ ತಕ್ಷಣ "ನಾನು ಇವತ್ತು ಈ ಕೆಲಸ ಮಾಡಬೇಕು" ಎಂಬ ಒಂದು ಸಣ್ಣ ಉದ್ದೇಶವಿದ್ದರೂ ಸಾಕು, ಅದು ನಮ್ಮ ಬದುಕಿಗೆ ಅರ್ಥ ನೀಡುತ್ತದೆ. ಅದು ಸಮಾಜ ಸೇವೆಯಾಗಿರಬಹುದು ಅಥವಾ ಗಿಡಗಳಿಗೆ ನೀರು ಹಾಕುವ ಕೆಲಸವಾಗಿರಬಹುದು.
* ಕೃತಜ್ಞತಾ ಭಾವ: ನಾವು ಹೊಂದಿಲ್ಲದ ವಸ್ತುಗಳ ಬಗ್ಗೆ ಕೊರಗುವುದಕ್ಕಿಂತ, ನಮ್ಮ ಬಳಿ ಇರುವುದಕ್ಕೆ ಕೃತಜ್ಞತೆ ಸಲ್ಲಿಸುವುದು ಸಂತೋಷದ ದಾರಿಯಾಗಿದೆ.

4. ಭಾರತೀಯ ಸಂದರ್ಭ ಮತ್ತು ಸವಾಲುಗಳು : ನಮ್ಮ ದೇಶದಲ್ಲಿ ಇಂದು ಒಂದು ದೊಡ್ಡ ವೈರುಧ್ಯವಿದೆ. ಒಂದೆಡೆ ಯುವಶಕ್ತಿ ಇದೆ, ಇನ್ನೊಂದೆಡೆ ವಯಸ್ಸಾದವರ ಸಂಖ್ಯೆಯೂ ಬೆಳೆಯುತ್ತಿದೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆ 'ಹೆಲ್ತ್ ಸ್ಪ್ಯಾನ್' ಮತ್ತು 'ಜಾಯ್ ಸ್ಪ್ಯಾನ್' ಗೆ ಪೂರಕವಾಗಿದೆಯೇ?
   ಹಿಂದಿನ ಅವಿಭಕ್ತ ಕುಟುಂಬಗಳಲ್ಲಿ ಹಿರಿಯರಿಗೆ ಗೌರವವಿತ್ತು, ಅವರ ಜೊತೆ ಮಾತಾಡಲು ಮೊಮ್ಮಕ್ಕಳಿದ್ದರು. ಇದರಿಂದ ಅವರ ಜಾಯ್ ಸ್ಪ್ಯಾನ್ ಸಹಜವಾಗಿಯೇ ಹೆಚ್ಚುತ್ತಿತ್ತು. ಇಂದು ವಿಭಕ್ತ ಕುಟುಂಬಗಳಲ್ಲಿ ಹಿರಿಯರು ನಾಲ್ಕು ಗೋಡೆಗಳ ಮಧ್ಯೆ ಒಂಟಿಯಾಗುತ್ತಿದ್ದಾರೆ. ನಾವು ಭೌತಿಕವಾಗಿ ದೂರವಾದರೂ, ಭಾವನಾತ್ಮಕವಾಗಿ ಹತ್ತಿರವಾಗುವ ಕಲೆ ಕಲಿಯಬೇಕಿದೆ.
5. ಬದುಕಿನ ಸಂಜೆ ಹೇಗಿರಬೇಕು?
   ಬದುಕು ಒಂದು ಸುಂದರವಾದ ಸೂರ್ಯಾಸ್ತದಂತಿರಬೇಕು. ಸೂರ್ಯ ಮುಳುಗುವಾಗ ಆಕಾಶಕ್ಕೆ ಬಣ್ಣ ತುಂಬುವಂತೆ, ನಮ್ಮ ಜೀವನದ ಕೊನೆಯ ದಿನಗಳು ಕೂಡ ಜ್ಞಾನ ಮತ್ತು ಶಾಂತಿಯ ಬಣ್ಣಗಳಿಂದ ಕೂಡಿರಬೇಕು.
   ಇದಕ್ಕಾಗಿ ನಾವು ಇಂದೇ ತಯಾರಿ ನಡೆಸಬೇಕು:

1. ಹಣಕಾಸಿನ ಭದ್ರತೆ: ನಮ್ಮ ಆರೋಗ್ಯದ ವೆಚ್ಚಗಳಿಗೆ ನಾವು ಯಾರನ್ನೂ ಅವಲಂಬಿಸದಂತೆ ಯೋಜನೆ ರೂಪಿಸಿಕೊಳ್ಳಬೇಕು.
2. ಹವ್ಯಾಸಗಳ ಪೋಷಣೆ: ಸಂಗೀತ, ಚಿತ್ರಕಲೆ, ಲೇಖನ ಅಥವಾ ತೋಟಗಾರಿಕೆ – ಇವು ಬದುಕಿನ ಸಂಜೆಯಲ್ಲಿ ನಮಗೆ ಅತ್ಯುತ್ತಮ ಸಂಗಾತಿಗಳು.
3. ಸರಳ ಜೀವನ: ಅಗತ್ಯಗಳನ್ನು ಕಡಿಮೆ ಮಾಡಿಕೊಂಡಷ್ಟೂ ಚಿಂತೆಗಳು ಕಡಿಮೆಯಾಗುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ, ಜೀವನವು ಕೇವಲ ಜನನ ಮತ್ತು ಮರಣದ ನಡುವಿನ ಅವಧಿಯಲ್ಲ. ಇದು ನಾವು ಆರೋಗ್ಯವಾಗಿ ನಡೆಸಿದ ಪಯಣ ಮತ್ತು ನಾವು ಹಂಚಿದ ನಗು. 'ಲೈಫ್ ಸ್ಪ್ಯಾನ್' ಎನ್ನುವುದು ವಿಧಿಯ ಬರಹವಾದರೆ, 'ಹೆಲ್ತ್ ಸ್ಪ್ಯಾನ್' ಮತ್ತು 'ಜಾಯ್ ಸ್ಪ್ಯಾನ್' ಎನ್ನುವುದು ನಮ್ಮ ಪ್ರಯತ್ನದ ಫಲ.

ನಮ್ಮ ಬದುಕು ಒಂದು ವೃಕ್ಷದಂತಿರಲಿ. ಅದು ಕೇವಲ ಎತ್ತರಕ್ಕೆ ಬೆಳೆಯುವುದಷ್ಟೇ ಅಲ್ಲ (Life Span), ಅದು ಹಸಿರಾಗಿರಬೇಕು (Health Span) ಮತ್ತು ಹೂವು–ಹಣ್ಣುಗಳನ್ನು ಬಿಡುತ್ತಾ ಇತರರಿಗೂ ನೆರಳಾಗಬೇಕು (Joy Span). ಇಂತಹ ಸಮತೋಲಿತ ಜೀವನವೇ ಸಾರ್ಥಕ ಜೀವನ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,